ಡಾ. ವಿ. ಶೆಟ್ಟಿಯವರ
ಮಂಗಳೂರು ಗಜಾನನ
ಬೀಡಿಗಳನ್ನೇ ಉಪಯೋಗಿಸಿ
ಒಳ್ಳೇ ನಿಶಾಣಿ ಹೊಗೆಸೊಪ್ಪಿನಿಂದಲೇ
ತಯಾರಿಸಿದ ಈ ಬೀಡಿಯನ್ನು ಒಂದಾವ
ರ್ತಿ ಉಪಯೋಗಿಸಿದರೆ ಖಾಡಿತವಾಗಿ
ನಿಮ್ಮನ್ನು ಆಕರ್ಷಿಸುವುದು.
ಎಲ್ಲೆಲ್ಲಿಯೂ ಏಜೆಂಟರ ಬೇಕು.
ವಿವರಗಳಿಗೆ— ಪಿ. ವಂಜಪ್ಪ,
ಹಳೇ ಅಗ್ರಹಾರ, ಮೈಸೂರು.

Regd No. M 1299 SATYAVADI Founded 1927

ಸತ್ಯವಾದಿ

ಸಂಪುಟ 26 ಸಂಚಿಕೆ 111] ಶನಿವಾರ 27—2—1943 [ಪ್ರತಿ 6 ಪೈ

ಸತ್ಯವಾದಿ ಪತ್ರಿಕೆಗೆ
ಚಂದಾದಾರರಾಗಿರಿ
ದಿನ ಮತ್ತು ವಾರಪತ್ರಿಕೆಗೆ
ಚಂದಾ ಮೈಸೂರು ಮತ್ತು ಏಜೆಂಟರಿಗೆ
ತಿಂಗಳಿಗೆ 6 ಆಣೆ
ವಾರಪತ್ರಿಕೆಗೆ
ಪರಸ್ಥಳಕ್ಕೆ ಚಂದಾ ವರ್ಷಕ್ಕೆ ಅಂಚೆವೆಚ್ಚ
ಸೇರಿ ರೂ 1-12-0

ವರ್ತಮಾನ

೨೩ ನೇ ತಾರೀಖಿನಿಂದ ಮೈನೇಕ್ ಸಿಂಗ್ ಮುನಿಸಿಪಾಲಿಟಿ ಗುಡಿಸುವವರು ಮುಷ್ಕರ ಹಿಡಿದಿರುತ್ತಾರೆ

ವಾಷಿಂಗ್ಟನ್ನಲ್ಲಿ ನಡೆದ ಅಮೆರಿಕಾ ಕಾಂಗ್ರೆಸ್ ಸಭೆಯಲ್ಲಿ ಜರ್ಮನಿಗಿಂತ ಜಪಾನಿಯರು ಘಟ್ಟಿಗರೆಂದು ತಿಳಿಸಲ್ಪಟ್ಟಿತು.

ಮುಂಬೈ ಸಮಾಪದಲ್ಲಿಯ ಕಾರ್ಲಿ ಗುಹಾಲಯವು ಧನಾಢ್ಯನಾದ ಒಬ್ಬ ವೈಶ್ಯಂತೀ ವರ್ತಕನಿಂದ ನಿರ್ಮಿಸಲ್ಪಟ್ಟಿತೆಂದು ತಿಳಿದು ಬಂದಿದೆ

ಜೆಕೋಸ್ಲೋವೇಕಿಯಾದಲ್ಲಿ ಎಲ್ಲರೂ ಯುದ್ಧದ ಕಾರ್ಖಾನೆಯಲ್ಲಿ ಕೆಲಸ ಮಾಡಬೇಕು ಇಲ್ಲವೆ ಜರ್ಮನಿಗೆ ತೆರಳಬೇಕೆಂದು ಹಿಟ್ಲರನ ಆಜ್ಞೆಯಾಗಿದೆ.

ವಲ್ಸರ್‌ಕ್ಷೆಮರ್ಲಿ ಮೇಲೆ 4 ನೇ ದಾಳಿಯಾಯಿತು. ಅಗ್ನಿ ಜ್ವಾಲೆಯು ಮೈಲಿ ಮೈಲಿಯಲ್ಲಿ ಕಾಣಿಸಿತು. 7 ಅಮೆರಿಕ ವಿಮಾನಗಳು ಪತ್ತೆಯಿಲ್ಲ.

ಒಬ್ಬ ತಂತೀ ಜವಾನನಿಗೂ ನೇಪಾಳಾ ಪೋಲೀಸ್ ಕಾನ್‌ಸ್ಟೇಬಲನಿಗೂ ಮಾರಿಯಂಬಲ ಜಗಳವಾಗಿ ಕಾನಸ್ಟೇಬಲ್ ತಂತಿಯವನ ಮೇಲೆ ತಪಾಕಿ ಹಾರಿಸಿದನು. ಪೋಲೀಸ್ ಕಾನಸ್ಟೇಬಲ್ ಈಗ ಜೈದು ಮಾಡಲ್ಪಟ್ಟಿರುವನು.

ಮುಂಬಯಿಯಲ್ಲಿ ತಂಗಳಿಗೆ 230 ರೂ ಪಾಯಿ ಬಾಡಿಗೆ ಕೊಡ ತಿಣ್ಣವರಿಂದ ಹೆಚ್ಚು ಬಾಡಿಗೆಗೆ ಏರಿಸಬಾರದೆಂದು ಆಜ್ಞೆಯಾಗಿತ್ತಷ್ಟೆ. ಇನ್ನು ಮುಂದೆ ಯಾವ ಬಾಡಿಗೆಯನ್ನೂ ಹೆಚ್ಚಿಸಕೂಡದೆಂದು ಮತ್ತೊಂದು ಆಜ್ಞೆಯಾಗಿದೆ

ಇಂಡಿಯಾದಲ್ಲಿ ಈಗ ಚಾಲ್ತಿಯಲ್ಲಿರುವ ಒಂದು ಗಂಟೆಯನ್ನು ಮಾಗಿ ಕಾಲ ಕಳೆದ ಕೂಡಲೇ ಹಿಂದಕ್ಕೆ ಹಾಕುವುದು ಅಂದರೆ ಹಿಂದಿನ ಗಂಟೆಯಂತೆ ಗಡಿಯಾರ ಸಡೆಯಬೇಕು.

ಇದುವರೆಗೆ ಇಂಡಿಯಾದಲ್ಲಾದ ಕಾಗದದಲ್ಲಿ ಶೇಕಡ 90 ರಷ್ಟು ಪೊಲಿಟರಿಯವರಿಗೆ ಕೊಟ್ಟು ಬಾಕಿ ಶೇ. 10 ರಂತೆ ಇಲ್ಲಿಯವರ ಉಪಯೋಗಕ್ಕೆ ಕೊಡುತ್ತಿದ್ದರು. ಇನ್ನು ಮೇಲೆ ಶೇಕಡ 30 ರಂತೆ ಖಾಸಗಿ ಜನರಿಗೆ ಕೊಡುವರು.

ಮಹಾತ್ಮ ಗಾಂಧಿಯವರು

ನಿನ್ನೆ ಸಾಯಂಕಾಲ ಶ್ರೀ ರಾಜಗೋಪಾಲಾಚಾರಿಯವರು ಗಾಂಧೀಜಿಯವರನ್ನು ಕಂಡಿದ್ದರು. ಗಾಂಧಿಯವರು ಹರ್ಷಚಿತ್ತರಾಗಿರುತ್ತಾರೆಂದು ಹೇಳಿದರು. ಇವರಲ್ಲದೆ ಶ್ರೀ ವಲ್ಲಭಾಯ್‌ದೇಸಾಯಿ, ಶ್ರೀ ಹೀರ್‌ಜಿಂದ್ ಮಾಲ್‌ಜಿಂದಾನವರೂ ಸಹ ಭೇಟಿ ಮಾಡಿದರು.

ಶ್ರೀ ರಾಜಗೋಪಾಲಾಚಾರಿಯವರು ಮಹಾತ್ಮಾ ಗಾಂಧಿಯವರ 21 ದಿವಸದ ಉಪವಾಸವನ್ನು ಸುಖವಾಗಿ ಕಳೆಯುವರೆಂದು ಹೇಳಿದರು.

ಸಾದರ ಸ್ವೀಕಾರ

1942 ರಲ್ಲಿ ಜುಲೈ 8 ರಿಂದ 19 ರವರೆಗೆ ಶ್ರೀಮನ್ಮಹಾರಾಜರವರು ತಮ್ಮ ಕಾರ್ಯದರ್ಶಿ. ಕೋಲಾರ, ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾಡಿದ ಪ್ರವಾಸದ ವಿಷಯಗಳನ್ನು ಸೇರಿಸಿ ಸೆಕ್ರಾರಿಯಟ್ ಪಬ್ಲಿಸಿಟಿ ಆಫೀಸರವರಿಂದ ಪ್ರಕಟಿಸಲ್ಪಟ್ಟಿರುವ ಪುಸ್ತಕದ ಪ್ರತಿಯೊಂದು ನಮಗೆ ತಲಪಿದೆ. ಅದನ್ನು ಸಾದರದಿಂದ ಸ್ವೀಕರಿಸಿರುತ್ತೇವೆ.

ಜರ್ಮನಿ

ನಿನ್ನೆ ದಿವಸ ಆಂಗ್ಲೇಯರು ಜರ್ಮನಿಯ ಸ್ಯೂರಂಬರ್ಗ್‌ನ ಮೇಲೆ ಧಾಳಿ ಮಾಡಿದರು. 1000 ಪೌಂಡುಗಳ ಬಾಂಬುಗಳು ಪಟ್ಟಣದಲ್ಲಿ ಬಿದ್ದು ಭಾನಿಯಲ್ಲಿ 300 ಅಡಿ ಭೂಮಿ ಕೊರೆಯಿತು. ಶತ್ರುಗಳ ಸರ್ಚ್ ಲೈಟು ಉಪಯೋಗಿಸಲು ವಿಶೇಷ ಬಾಂಬನ್ನು ಹೊಡೆತ ಹೆಚ್ಚಲು ಸರ್ಚ್ ಲೈಟ್ ಮಾಯವಾಯಿತು

ಕುದುರೆ ಜೂಜು

ಕಲ್ಕತ್ತಾದಲ್ಲಿ ಬುಧವಾರದ ಕುದುರೆ ಜೂಜಿನಲ್ಲಿ 12 ಟ್ರಿಬಲ್ ಈವೆಂಟ್ ಟಿಕೆಟ್‌ಗಳಿಗೆ ತಲಾ 2765 ರೂಪಾಯಿನಂತೆ ದೊರೆತಿರುವುದು.

ಮಹಾತ್ಮ ಗಾಂಧಿಯವರು

ಗಾಂಧಿಯವರ ಉಪವಾಸವು ಮಾರ್ಚಿ 3 ನೇ ತಾ|| ಬುಧವಾರ ಮುಗಿಯುವುದು. ಉಪವಾಸವನ್ನು ಯಶಸ್ವಿಯಾಗಿ ಮುಗಿಸುವರೆಂದು ಡಾ|| ಗಳ ಈಚಿನ ಅಭಿಪ್ರಾಯ.

ಮಹಾತ್ಮರ ಆಯುರಾರೋಗ್ಯದ ಬಗ್ಗೆ ಪ್ರಾರ್ಥನೆಗಳು ಅನೇಕ ಸ್ಥಳಗಳಲ್ಲಿ ನಡೆಯುತ್ತಲೇ ಇವೆ, ಹರತಾಳಗಳು ಆಚರಿಸಲ್ಪಡುತ್ತಿವೆ

ಗಾಂಧಿಯವರು ಬಿಡುಗಡೆ ಮಾಡಲ್ಪಡಬೇಕೆಂಬ ಕೋರಿಕೆಗಳು ನಡೆಯುತ್ತಲೇ ಇವೆ ಇನ್ನೂ ಅನೇಕ ಕಡೆಗಳಲ್ಲಿ ಮಹಾತ್ಮ ಗಾಂಧಿಯವರು ಉಪವಾಸದ ಬಗ್ಗೆ ಸಹಾನುಭೂತಿ ಕೋರಲು ಉಪವಾಸಗಳು ನಡೆಯುತ್ತಲೇ ಇವೆ.

The Mysore State War Fund Lottery

(By kind permission of the Government of Mysore)

Three **Lakhs of Tickets** at Re 1 each on sale

from 22 nd November 1942 to 21 st March 1943.

Half the gross collections will be distributed as prizes

The Draw will take place on 13 th June 1943

If all the tickets are sold the **First Prize** will be Rs. 18.750 and the Second **Prize** Rs. 9,375.

There are 250 other prizes

For particulars, please apply to—

The Secretary, Mysore War Fund, Public Offices, Bangalore.

ಶ್ರೀ 'ಓಂ' ಬ್ರಾಂಡ್ ಕೇಸರಿ

ಈ "ಓಂ" ಗುರ್ತಿನ ಕೇಸರಿಯು ಅತ್ಯಂತ ಪರಿಶುದ್ಧವಾದುದು. ಇದರಲ್ಲಿ ಯಾವ ಅಕ್ಕೇಸರವಾದ ಪದಾರ್ಥವೂ ಸೇರಿಲ್ಲ; ಮತ್ತು ಶಾಸ್ತ್ರೀಯವಾಗಿ ಪರಿಶುದ್ಧವಾದುದು. ದೇವಸ್ಥಾನಗಳಲ್ಲಿಯೂ ದೇವರ ಪೂಜೆಗೂ, ಔಷಧಿಗಳಿಗೂ ತಿಂಡಿ ಪದಾರ್ಥಗಳಿಗೂ ಸುಖ ಸಂತೋಷಕಾಲದಲ್ಲೂ ಉಪಯೋಗಿಸಲ್ಪಡಲು ಅರ್ಹವಾಗಿದೆ.

ಅತ್ಯಂತ ಪರಿಶುದ್ಧವಾದುದೆಂದು ಗ್ಯಾರಂಟಿ ಹೊಂದಿದೆ.

ವಲ್ಲಭದಾಸ್ ತೇಜಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು

ಹಾಲು ಪಾನೀಯಗಳು

ನಮ್ಮಲ್ಲಿ ಒಂದು ವಿಶೇಷವೇ ಸರಿ

ಕೆನೆ, ಬೆಣ್ಣೆ, ಆತಿ ಮಧುರವಾದ ಕ್ರೀಮ್, ಇವುಗಳಿಗೆ ಈ ಕೆಳಗಿನ ಅಡ್ರೆಸ್ಸಿಗೆ ಈ ದಿನವೇ ಫೋನ್ ಮಾಡಿ

ಸಿಟಿಸನ್ನ್ ಡೈರಿ ಟೆಲಿಫೋನ್ ನಂಬರು 492

ಹಳೇ ಪೋಸ್ಟಾಫೀಸ್‌ರಸ್ತೆ, ಮೈಸೂರು

ಈ ವಾರದ ಕಥೆ

ರಾಧಾ - ನಗು

ಲೇಖಕರು — ಎಂ. ಕೆ. ಅನಂತರಾಜು, ಮೈಸೂರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮಾಧವನಿಗೆ ಒಂದೇ ಒಂದೆ ಯೋಚನೆ. ಎಲ್ಲಿ ಓದಿದರೆ ಸರಿ, ಯಾವ್ರದರಿಂದ ತನಗೆ ದೊಡ್ಡ ಉದ್ಯೋಗವು ದೊರೆತ್ತು, ಈಗೊದಗಿದ ಅವಮಾನವೆಲ್ಲಾ ಹಾಳಾಗುತ್ತದೆಂದು ಯೋಚಿಸಿ, ಯೋಚಿಸಿ, ಕಡೆಗೊಂದು ಸಮಾಧಾನಕ್ಕೆ ಬಂದಾಗ ಅವನ ದವಡೆಯೆಲ್ಲಾ ಶಾಂತವಾಯಿತು. ಅವನು ತಕ್ಷಣವೇ, ತಿಂಡಿಯನ್ನು ತಿನ್ನುತ್ತಿದ್ದವನು, ಅಲ್ಲಿದಲ್ಲೇ ನಿಲ್ಲಿಸಿ, ತನ್ನ ತಾಯಿಯ ಸಮೀಪಕ್ಕೆ ಹೋಗಿ ಅವರ ಹತ್ತಿರ ಏನೇನೋ ಹೇಳಿದ. ಅವರು ಒಪ್ಪಲಿಲ್ಲ, ಆ ಮೇಲೆ ಒಲವಂತದಿಂದ ಅವನ ಆಲೋಚನೆಯನ್ನು ಅಂಗೀಕರಿಸಿದರು.

ಆ ರಾತ್ರಿ 8 ಗಂಟೆಯಾಗಿತ್ತು. ಮಾಧವನು ಬೇಗ ಬೇಗ ಊಟವನ್ನು ಮುಗಿಸಿಕೊಂಡು, ಮಧ್ಯಾಹ್ನವೇ ಸಿದ್ಧವಾಗಿ, ಪ್ಯಾಕ್ ಮಾಡಿಟ್ಟಿದ್ದ ತನ್ನ ಬಟ್ಟೆಬರೆಗಳನ್ನೂ, ಪುಸ್ತಕಗಳನ್ನೂ ತೆಗೆದುಕೊಂಡು, ಮದ್ರಾಸ್ ಟ್ರೈನಿಗೆ ಹೊರಟುಹೋದ.

9 ಗಂಟೆ ಸುಮಾರಿಗೆ, ನಿಧಾನವಾಗಿ ಪಂತುಲು 'ಅಯ್ಯನವರ ದಿಣ್ಣೆ'ಯಿಂದ ಬಂದರು. ಬಂದವರೇ, ಕೈಕಾಲುಗಳನ್ನು ತೊಳೆದುಕೊಂಡು ಒಂದು ಪಂಚೆಸಾತ್ತೆಯಲ್ಲಿ ಮಡಿನೀರು ತೆಗೆದುಕೊಂಡು, ಸಂಧ್ಯಾವಂದನೆಯನ್ನು ಮಾಡಿ ಆಮೇಲೆ ಊಟದ ಶಾಸ್ತ್ರವನ್ನು ಮುಗಿಸಿಕೊಂಡು ಆ ದಿನ ಮಾಧವನ ಮೇಲೆ ಕೋಪಿಸಿಕೊಂಡಿದ್ದರಿಂದ ಅವನ ಸುದ್ದಿಯನ್ನೇ ಮಾತನಾಡದೆ, ಅಂಗಳದಲ್ಲಿ ಮಲಗಿಕೊಂಡರು. ವೆಂಕಮ್ಮನವರೂ ಅವನ ಸಮಾಚಾರವನ್ನೇ ಎತ್ತಲಿಲ್ಲ. ಆ ರಾತ್ರಿ ಹೇಗೋ ಕಳೆಯಿತು.

ಉದಯ ಸ್ನಾನ ಸಂಧ್ಯಾಧ್ಯಾನಾವಾಹನೆಗಳೆಲ್ಲಾ ತೀರಿದ ಮೇಲೆ ಪಂತುಲುರಿಗೆ ಥಟ್ಟನೆ ತಾವು ಹಿಂದಿನ ಮಧ್ಯಾಹ್ನ ಕಛೇರಿಯ ಪೆಟ್ಟಿಗೆಯಲ್ಲಿ ಅಡಿಮೂರ್ತಿಶೆಟ್ಟಿ ಕೊಟ್ಟ 800 ರೂಪಾಯಿಗಳನ್ನು ಮತ್ತು ಕಾಗದ ಪತ್ರಗಳನ್ನು ಇಡುತ್ತಿರುವಾಗ ಶಿವಯ್ಯಶಾಸ್ತ್ರಿ ಒಂದುದರಿಂದ. ಬಂದ ಮೇಲೆ ಪೆಟ್ಟಿಗೆಯ ಬಾಗಿಲನ್ನು ಹಾಕಿದಂತೆಯಿತು ಎಂದುಕೊಂಡು ಅವನೆ ಕೂಡ, ಅಯ್ಯನನವರ ದಿಣ್ಣೆಗೆ ಹೊರಟುಹೋಗಿದ್ದರು. ಆದರೆ ರಾತ್ರಿ ಮರೆತು ಹಾಗೇ ಮಲಗಿ ಬಿಟ್ಟಿದ್ದರು, ಈಗ ಜ್ಞಾನ ಬಂತು, ಕೂಡಲೇ ತಮ್ಮ ಕೋಣೆಗೆ ಓಡಿದರು.

ನೋಡುತ್ತಾರೆ, ಪೆಟ್ಟಿಗೆ ತೆರೆದ ಹಾಗೆಯೇ ತೆರೆದಿದೆ. ಕಾಗದಗಳೆಲ್ಲವೂ ಇರಿಸಿದ ಹಾಗೆಯೇ ಇದ್ದವು. ಆದರೆ ರೂಪಾಯಿಗಳೇ ಕಾಣಿಸಲಿಲ್ಲ ಪಂತುಲಿಗೆ ಗಾಬರಿಯಾಯಿತು ಯಾರು ತೆಗೆದುಕೊಂಡರು ? ಏನೇ ಎಂದು ಕೂಗಿಕೊಂಡರು.

ಏನು ? ಎಂದು ವೆಂಕಮ್ಮನವರು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ಅಲ್ಲಿಗೆ ಬಂದರು.

ಏನೇ; ರೂಪಾಯಿಗಳೇ ಇಲ್ಲಲ್ಲೇ ? ಅಂದರು, ಪಂತುಲು.

ಏನೋ ನನಗೇನು ಗೊತ್ತು ಎಲ್ಲಿಟ್ಟಿರೋ ಜೋಪಾನಕ್ಕೆ ಹುಡುಕಿ ಅಂದರು ವೆಂಕಮ್ಮ.

ಇನ್ನೆಲ್ಲಿ ಇಡುತ್ತೇನೆ. ನಿನ್ನೆ ಮಧ್ಯಾಹ್ನ ಅಡಿಮೂರ್ತಿಶೆಟ್ಟಿ ಕೊಟ್ಟದ್ದು. 800 ರೂಪಾಯಿಗಳನ್ನು ಪೆಟ್ಟಿಗೇಲಿ ಇಡ್ತಾ ಇದ್ದೆ ಅಷ್ಟರಲ್ಲಿ ಶಿವಯ್ಯ ಬಂದ ಬಂದ ಮೇಲೆ ಪೆಟ್ಟಿಗೆಯ ಬಾಗಿಲನ್ನು ಹಾಕಿದರಾಯ್ತು ಅಂದು ಹೊರಟು ಹೋದೆ. ರಾತ್ರಿ ವರೆಗು ಹೋಯಿತು. ಈಗ ನೋಡ್ತೀನಿ ರೂಪಾಯಿಗಳೇ ಇಲ್ಲನಲ್ಲೇ ಎಂದರು. ಪಂತುಲು,

"ಏನೋ, ನನಗೇನು ಗೊತ್ತು" ಎಂದರು ಅವರ ಕುಟುಂಬ. ವೆಂಕಮ್ಮ.

'ದೊಡ್ಡವನ ಜನಾಬಾದಿಗೆ ಹೋಗಿದ್ದಾನೆ ಎರಡ್ನೇ ಅವ್ನೇನೋ ಅತ್ತೇ ಮನೇಗೋದ. ಉಳಿದವರು ಯಾರು. ನನ್ನ ಪೆಟ್ಟಿಗೆಯನ್ನು ನೋಡೋ ಅವ್ರು, ಮಾಧವನೇನಾದರೂ..... ಎಲ್ಲಿ ಮಾಧವ, ಹೊಂಗಡೆ ಎಲ್ಲಿಯಾದರೂ ಹೋಗಿದಾನೋ, " ಅಂದರು ಪಂತುಲು. ಆಗಲೂ ವೆಂಕಮ್ಮನವರು.

" ಏನೋ ಗೊತ್ತಿಲ್ಲಾ, " ಎಂದರು ಪಂತುಲುಗೆ ಬಹಳ ರೇಗಿಹೋಯಿತು.

ಎಲ್ಲದಕ್ಕೂ, ಏನೋ, ಏನೋ ? ಅಂತಿದ್ದೀಯಲ್ಲಾ, ನಿನ್ನತ್ತೆ. ಮುಂಡೆ ಎಲ್ಲಿಗೆ ಕಳ್ಸಿದ್ದೀಯೇ, ಅಂತ ಪಂತುಲು, ಹಲ್ಲುಗಳನ್ನೂ ಕಡಿಯುತ್ತಾ ಹೇಳಿದರು.

ವೆಂಕಮ್ಮನವರಿಗೆ ಅದೇನೂ ಹೊಸದಲ್ಲ ಯಾವ ಸಣ್ಣ ವಿಷಯಕ್ಕೂ ಪಂತುಲು ಬಾಯಿಗೆ ಒಂದಂತೆ ಮಾತನಾಡಿಕೊಳ್ಳುವುದೇ !

" ರಾತ್ರಿಯಿಂದ ಅವನು ಪತ್ತೆಯೇ ಇಲ್ಲ " ಎಂದು ವೆಂಕಮ್ಮನವರು ಮೆಲ್ಲಗೆ ಹೇಳಿದರು.

" ಏನೋ ಮಾಯ್ತು. ಅನ್ನುತ್ತಾ ಪಂತುಲು ಸುತ್ತಮುತ್ತಲು ಹಳ್ಳಿಗಳಿಗೆಲ್ಲಾ ಆಳುಗಳನ್ನು ಕಳುಹಿಸಿದರು, ಎಲ್ಲಾ ಕಡೆ ಹುಡುಕಾಡಿದರು ಮಾಧವನೆಲ್ಲಿಯೂ ಕಾಣಲಿಲ್ಲ.

ಏನೇ ಎಲ್ಲಾದ್ರೂ ಹೋಗ್ತೀನಿ ಅಂತ ಹೇಳಿದ್ದೇನೆ, ಅಂದ್ರು ಪಾತ್ರಲು. ಇಲ್ಲ ಏನ್ದು ಉತ್ತರ ಬಂತು ಪಂತುಲುಗೆ ಕೋಪ ಹೆಚ್ಚಾಯಿತು. ಅವನೇ ಕಳೆದುಕೊಂಡು ಹೋದನೆಂದು ದೃಢಪಟ್ಟುಕೊಂಡರು.

" ಅಯೋಗ್ಯ ಲಂಂ ರೂಪಾಯಿಗಳನ್ನು ತೆಗೆದುಕ್ಕೊಂಡು ಹೋದರೆ ಏನಾಗ ವ್ತದೆಂದುಕೊಂಡನೇನೋ, ಅವಿದೇಯ, ಇನ್ನು ಸಾಯ್ತಿದ್ದೀನಿ ಅಂದ್ರೂ ಒಂದ ಪಿಡಿ ಕಾಸೂ ಕೊಡೋದಿಲ್ಲ, ಮನೆ ಹಾಳನಿಗೆ ಏನಾದರೂ ಸರಿಯೆ, ಇನ್ನು ಅವನು ನನ್ನ ಮಗನೂ ಅಲ್ಲ, ನಾನು ಅವನ ತಂದೆಯೂ ಅಲ್ಲ ಇದು ಸತ್ಯ. ಅವನು ನನ್ನ ಮನೆ ಹೊಸಲು ಮೆಟ್ಟುವ ಸಾಮಿ ಈವತ್ತಿಗೆ ಆಯಿತು" ಎಂದು ಗೊಣಗುಟ್ಟುತ್ತಾ ಪಂತುಲು ಗದ್ದೆಬು ಕಡೆ ಹೊರಟುಹೋದರು.

ಆ ಹೊತ್ತಿಗೆ ಮಾಧವನು ಹೊರಟುಹೋಗಿ ಒಂದು ವಾರವಾಗಿ ಹೋಗಿತ್ತು. ಪಂತುಲು ಊಟಮಾಡಿ ಮಲಗಿದ್ದರು ಆಗತಾನೇ ಎದ್ದು, ಹಾಗೇ ಹಾಸಿಗೆಯ ಮೇಲೆಯೇ ಒಂದು ಪುಸ್ತಕ ತೆಗೆದುಕೊಂಡು ಓದುತ್ತಿದ್ದರು, ವೆಂಕಮ್ಮನವರು ತಮ್ಮ ಪತಿಗೆ ಸಮೀಪದಲ್ಲಿ ಕುಳಿತು, ಭಾರತವನ್ನು ಓದಿಕೊಳ್ಳುತ್ತಿದ್ದರು. ಅಷ್ಟರಲ್ಲಿ ಅಂಡೆಯವನು ಪಂತುಲುಗೆ, ಬಂದಿದ್ದ ಒಂದು ಕವರನ್ನು ತಂದುಕೊಟ್ಟು ಹೊರಟು ಹೋದ. ಪಂತುಲು ತಮ್ಮ ಕನ್ನಡಕವನ್ನು ಮೂಗಿನ ಮೇಲೇರಿಸಿ, ಕಾಗದವನ್ನು ಓದ ತೊಡಗಿದರು, ಏನು ಕಾರಣವೋ ಏನೋ ಪಂತುಲು ಎರಡು ಸಂಕ್ಷಿ ಓದಿನ ಕೂಡಲೆ ಅಯ್ಯೋ ಎಂದು, ಚೀರಿ ಹಾಗೇ ಹಾಸಿಗೆ ಮೇಲೆ ಮೂರ್ಛೆ ಬಿದ್ದರು, ವೆಂಕಮ್ಮ ಸಿಡಿಲು ಬಡಿದಂತಾಯಿತು, ಏನಿದು ಸ್ವಾಮಿಗೆ ಎಂದು ತಕ್ಷಣ ಎದ್ದು ತಮ್ಮ ಪತಿ ದೇವರನ್ನು ಉಪಚರಿಸತೊಡಗಿದರು. ಈ ಗಲಾಟೆಯ ಮಧ್ಯೆ, ಆಚು ಬಾಜು, ಮನೆಯವರೆಲ್ಲಾ ಸೇರಿಬಿಟ್ಟು ವೆಂಕಮ್ಮನವರಿಗೆ ಧೈರ್ಯ ಹೇಳುತ್ತಿದ್ದರು. ವೆಂಕಮ್ಮನವರು ತನ್ನ ಸ್ವಾಮಿಯ ತಲೆಯನ್ನು ತೊಡೆಯ ಮೇಲಿರಿಸಿಕೊಂಡು ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದರು. ಸ್ವಲ್ಪ ಹೊತ್ತಿಗೆ ಪಂತುಲಿಗೆ ಸ್ವಲ್ಪ ಪ್ರಜ್ಞೆ ಬಂದ ಹಾಗಾಯಿತು. ಅವರು ಮೆಲ್ಲಗೆ ಕಣ್ಣು ಬಿಟ್ಟರು.

"ಅಯ್ಯೋ ನನ್ನ ಮನೆ ಮುಳುಗಿ ಹೋಯಿತು, ಇನ್ನು ನಾನು ಬದುಕುವ ಬಗೆ ಹೇಗೆ" ಎಂದು ಮತ್ತೆ ರೋಧಿಸತೊಡಗಿದರು.

ಇಷ್ಟರಲ್ಲೇ ಮನೆಯ ಈಚೆ ಒರುತ್ತಿದ್ದ ಪಂತುಲು ಜ್ಯೇಷ್ಠ ಪುತ್ರ, ಸೆರೆದಿದ್ದ ಗುಂಪನ್ನು ವಿಷಯ ತಿಳಿಯದೆ ಗಾಭರಿ ಪೊಂದಿ ಒಡಿ ಒಂದು ನೋಡಿದ ಪಂತುಲು ರೋಧಿಸುತ್ತಲೇ ಇದ್ದರು, ವೆಂಕಮ್ಮನವರು ವಿಷಯ ತಿಳಿಯದೆ ಕಣ್ಣೀರಿಡುತ್ತ ತಮ್ಮ ಪತಿ ದೇವರಿಗೆ ಗಾಳಿ ಬೀಸುತ್ತಿದ್ದರು. ಪಂತುಲು ಜ್ಯೇಷ್ಠ ಕುಮಾರನನ್ನು ಮೆಲ್ಲಗೆ ಕುದಿಯ ಬಳಿಗೆ ಹೊರಟು ಅವರ ಕೈಲಿದ್ದ ಕಾಗದವನ್ನು ತೆಗೆದುಕೊಂಡು ಓದ ತೊಡ ದ [ಸಶೇಷ ———

ಯುದ್ಧವು ೧೯೪೩ ರಲ್ಲಿ ನುಗಿಯುವುದಿಲ್ಲ

ಅಮೆರಿಕಾದ ಲೇಬರ್ ಪ್ರೆಸ್ ಅಸೋಸಿಯೇಷನ್ ಸಮ್ಮೇಳನದಲ್ಲಿ, ಅಮೆರಿಕಾ ಸಂಯುಕ್ತ ಸಂಸ್ಥಾನದ ಯುದ್ಧದ ಅಂಡರ್ ಸೆಕ್ರೆಟರಿಯವರಾದ ಮಿ|| ರಾಬರ್ಟ್ ಪಾಟರ್ಸನ್ ರವರು ಯುದ್ಧವು 1943 ರಲ್ಲಿ ನುಗಿಯುವ ಸಂಭವನಿಲ್ಲವೆಂದೂ, 1944 ಅಥವಾ 1945 ರಲ್ಲಿ ಮುಗಿಯಬಹುದಾದ ಸಂಭವನವೆಂದೂ, ಈ ಅಂದಾಜು, ಈಗ್ಲಿನ್ತಿರುವ ನಾಜೀ ಶಕ್ತಿಯು ಮೆತ್ತೆ ಹೆಚ್ಚುತ್ತಿರುವ ಮಿತ್ರ ಮಂಡಲಿಯವರ ಶಕ್ತಿಯ ವಿಷಯದಲ್ಲಿ ದೊರೆತಿರುವ ಸಮಾಚಾರವನ್ನರಿತು ಮಾಡಲ್ಪಟ್ಟಿದೆಯೆಂದು ತಿಳಿಸಿರುವರು. ಅಲ್ಲದೆ, ವಿಜಯವು ಭಾರಿ ಹೊಡೆದಾಟದಿಂದ ಲಭಿಸುವುದೆಂದೂ, ಜರ್ಮನರು ಇನ್ನೂ ಶಕ್ತಿಯುತರಾಗಿಯೇ ಇರುವರೆಂದೂ, ಜರ್ಮನಿಗೆ ರಷ್ಯಾದವರು ಕೊಟ್ಟ ಏಟುಗಳಿಂದ ಸುಧಾರಿಸಿಕೊಳ್ಳಲು ಅವಕಾಶ ಕೊಟ್ಟರೆ ಅವರೂ ಮತ್ತು ಜಪಾನರು ಅಲ್ಲಲ್ಲಿ ಹಿಡಿದಿರುವ ಅಗಾಧ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕೊಟ್ಟರೆ ನಾವು ಖಂಡಿತವಾಗಿ ವಿಜಯವನ್ನು ಪಡೆಯಲಾಗದಿಲ್ಲವೆಂದು ತಿಳಿಸಿರುವರು.

ಶತ್ರುವಿನ ನಾಗಾಲು ಓಟ

ಕಾಕ್ಸಸ್, ಡಾಕ್ ಸ್ಥಳಗಳಿಂದ ಜರ್ಮನರು ಪಲಾಯನವಾದುದ್ದೇ ಹಿಟ್ಲರಿನ ಪತನವನ್ನು ವ್ಯಕ್ತಪಡಿಸುತ್ತದೆ. ರಾಸ್ತೋವ್ ಪತನವೂ ಖಾರ್ಕೋವಿನ ಸ್ಥಿತಿಯು ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ, ನಾಜೀ ಸೈನ್ಯವು ಅಜೇಯವೆಂಬ ಸಿದ್ಧಾಂತವನ್ನು ಕೆಂಪು ಸೈನ್ಯವು ಚೂರ್ಣವಾಗಿ ಮಾಡಿದೆ. ಶತ್ರುಸೇನೆಯು ವಿಧ್ವಂಸಕಕ್ಕಾಗಿ ರಷ್ಯನರು 30,000 ಸೈನಿಕರನ್ನು ಯುದ್ಧಕ್ಷೇತ್ರಕ್ಕೆ ಜಾಗ್ರತೆಯಲ್ಲಿ ಕಳಿಸಲಿರುವರು. ಶೈಥಿಲ್ಯಕಾಲದ ನಂತರ ತೀರ್ಥಭಾಗದ ಪ್ರೌಢಮೃತಿಯೊಂದಿದ ಹಿಟ್ಲರ್‌ಸೈನ್ಯ ಪುನಃ ಶೋಕಿಸಿಗೊಳ್ಳದಿರಲು ರಷ್ಯನರು ತಕ್ಕ ಏರ್ಪಾಡು ಮಾಡುವರೆಂಬುದು ಖಂಡಿತ. ಹಿಟ್ಲರಿನ ಪ್ರೌಢಿಗಳೆಲ್ಲವೂ ಧೂಳಿಪಟವಾಗಿವೆ. ಸುಮಾರು ಬಹ್ಮ ವರುಷಗಳ ಕಾಲ ವಿಜೃಂಭಿಸಿದ ಹಿಟ್ಲರಿನ ಸಿಂಹನಾದವು ಹಾಸ್ಯಾಸ್ಪದಕಾರಣವಾಗಿ ಪರಿಣಮಿಸುತ್ತಿದೆ. ಸ್ಟಾಲಿನ್‌ಗ್ರಾಡನ್ನು ಹಿಡಿಯಲ್ಲಿ ಹಿಡಿಯುವುದಾಗಿ ಜೀಳಿದವನು ಈಗ ತನ್ನ ಬೆನ್ನೆಲೆಯೇ ತುಂಡಾಗುತ್ತಿರುವಿಕೆಯನ್ನು ವಿಲೋಕಿಸುತ್ತಿರುವನು. ಜರ್ಮನ್ ಸೇನಾಧಿಪತಿ ವರ್ಗದಲ್ಲಿಯೂ, ಪ್ರಜಾವನ್ನುದಾಯದಲ್ಲಿಯೂ ದಾರುಣವಾದ ಅತೃಪ್ತಿಯು ತಲೆ ಎತ್ತಿದೆ. ಈಚಿನ ಅಪಜಯ ಪರಂಪರೆಗಳು ಹಿಟ್ಲರಿನ ಬುದ್ಧಿಯು ಪಲ್ಲಟ ಮಾಡಿನೆಯೆಂದು ಜರ್ಮನ್ ಕಾರ್ಮಿಕನಾಯಕನೇ ತಿಳಿಸುತ್ತಿದ್ದನು. ಹಿಟ್ಲರಿನ ಮಿತ್ರರೂ ಕ್ರಮಕ್ರಮವಾಗಿ ಬಿಡುತ್ತಿರುವರು.

ಗ್ರೇ ಮಾರ್ಕೆಟ್

ಇಂಗ್ಲೆಂಡಿನಲ್ಲಿಯೂ ಗ್ರೇ ಮಾರ್ಕೆಟ್ ಇದೆ. ಗ್ರೇ ಮಾರ್ಕೆಟ್ ಎಂದರೆ ಬಂದು ಪದಾರ್ಥವನ್ನು ರಹ್ಯಮಾಡಕೂಡದೆಂದರೆ ಆ ಪದಾರ್ಥಗಳಿಗೆ ಬಣ್ಣ ಬಳಿದು ಬೇರೆ ಹೆಸರಿನಿಂದ ಕಳಿಸುವುದು. ಮುಂಬಯಿನಿಂದ ಪರದೇಶಗಳಿಗೆ ಸಕ್ಕರೆ ಕಳಿಸಕೂಡದು. ಮುಂಬಯಿ ವರ್ತಕರು ಸಕ್ಕರೆಗೆ ಶೇಕಡ ಐದರಂತೆ ಬಣ್ಣ ಬಳಿದು ಗುಳಿಗೆ ಮಾಡಿ ಪೆಪರ್‌ಮೆಂಟ್ ಎಂದು ನಾಮಕರಣ ಮಾಡಿ ರಫ್ತು ಮಾಡುವರು.

ಇನ್ನು ಮುಂದೆ ಯುದ್ಧ ನಡೆಯಕೂಡದು

ಮಿ|| ರೂಸ್‌ವೆಲ್ಟರು ಒಂದು ಪತ್ರಿಕೆಗೆ ಒರೆಯುತ್ತಾ ಈಗ ಯುದ್ಧವು ಒಂದು ಹದಕ್ಕೆ ಬಂದಿದೆ ಮುಂದೆ ಯುದ್ಧವೇ ಆಗದ ಹಾಗೆ, ಹ್ಯಾಗೆ ಜನರಿಗೆ ಬೋಧನೆ ಮಾಡಬೇಕೆಂದು ಆಲೋಚಿಸುತ್ತಿದ್ದೇನೆಂದು ಒಡಿದಿರುವರು.

ಸೋಲ್ಜರುಗಳಿಗೆ ಶಿಕ್ಷೆ

ಮದ್ರಾಸಿನ ಮೂರು ಮಂದಿ ಬ್ರಿಟಿಷ್ ಸಿಪಾಯಿಗಳು ಒಂದು ಬೀಡಿ ಅಂಗಡಿಯಲ್ಲಿ ಒಂದು ಸಿಗರೇಟು ಪ್ಯಾಕನ್ನು ತೆಗೆದುಕೊಂಡು ದುಡ್ಡು ಕೊಡದಿರಲು, ಜನರ ಗುಂಪು ಸೇರಿತು. ಪೋಲೀಸಿನವರು ಬರಲು ಅಲ್ಲಿ ನೆರೆದಿದ್ದ ಕೆಲವರಿಗೆ ಸೊಡೆದರು. ಪೋಲೀಸಿನವರು ಆ ಮೂವರನ್ನೂ ವಿಲಿಟರಿಯವರಿಗೆ ಒಪ್ಪಿಸುವ ಮುನ್ನ ಪೋಲೀಸ್ ಸ್ಟೇಷನ್ನಿನಲ್ಲಿ ಒಬ್ಬ ಪೋಲೀಸ್ ಕಾನ್ಸ್‌ಟೇಬಲಿಗೆ ಹೊಡೆದರೆಂಬ ಮಿಲಿಟರಿ ಆಫೀಸರುಗಳು ಇವರಲ್ಲಿ ಒಬ್ಬನಿಗೆ 14, ಇನ್ನೊಬ್ಬನಿಗೆ 90, ಮತ್ತೊಬ್ಬನಿಗೆ 28 ದಿನಗಳ ಸಜಾ ವಿಧಿಸಿದರು.

ಜರ್ಮನರಿಂದ ಗಂಧಳದ ಬೆಂಕಿ ಬಾಂಬು

ಒಬ್ಬಯಾವಾಗ ಪಾಸ್‌ಫರಸ್ ಉರಿಯುವುದಿಲ್ಲ ಹೊಗೆಬಾಗಲೇ ಉರಿಯುವುದು, ಇದು ಬಹ್ಮೆ ಉರಿಗಳ ಉರಿಯುವುದಿಲ್ಲ ಧಾರಾಳ ಹೊಗೆ. ಈ ಬಾಂಬುಗಳನ್ನು ಈಗ ಜರ್ಮನರು ಈಗ ವಿಶೇಷವಾಗಿ ಉಪಯೋಗಿಸುತ್ತಿರುತ್ತಾರೆ.

ರಾಜಕೀಯ ಖೈದಿಗಳ ಬಿಡುಗಡೆಯಾಗಬೇಕು

ಉತ್ತರ ಆಫ್ರಿಕಾದಲ್ಲಿ ಇನ್ನು ೫೦೦ ಮಂದಿ ರಾಜಕೀಯ ಬಂದಿಗಳು ನಿರ್ಬಂಧದಲ್ಲಿರುವರೆಂದೂ ಅವರ ಬಿಡುಗಡೆ ಮತ್ತಿತರ ರೀತಿಯ ವ್ಯವಸ್ಥೆಯು ಕೂಡಲೇ ಆಗಬೇಕೆಂದು ಅಲ್ಲಿ ಸಿವಿಲಿಟರಿ ಕಮ್ಯಾಂಡರ್ ಹೇಳಿಕೆ,

ಜರ್ಮನ್ ಪರದ ಸ್ವೀಡಿಷ್ ಸಂಸ್ಥೆಗಳ ನಾಶ

ಸ್ವೀಡನ್ನಿನಲ್ಲಿ ಜರ್ಮನಿಗಾಗಿ ಕೆಲಸ ಮಾಡುತ್ತಿದ್ದ ಐದು ಔದ್ಯೋಗಿಕ ಸಂಸ್ಥೆಗಳು ಬಾಂಬು ಹಾಡಲ್ಪಟ್ಟು ನಾಶಪಡಿಸಲಾಗಿದೆ.

ತೇವಣಾತಿಗೆ ಮುಟ್ಟುಕೋಲು

ಬೊಂಬಾಯಿ ಚಿತ್ರಾ ಎಂಬ ಮರಾಠಿ ವಾರ ಪತ್ರಿಕೆಯು ಸರ್ಕಾರದಲ್ಲಿಟ್ಟಿದ್ದ ೨೦೦೦ ರೂ. ತೇವಣಾತಿ ಸರ್ಕಾರದ ಬೊಕ್ಕಸಕ್ಕೆ ಸೇರಿಸಿಕೊಳ್ಳಲಾಗಿದೆ.

ಹೊಸ ಫೈಟರ್ ವಿಮಾನಗಳು

ಕರ್‌ಸೈರ್ ಫೈಟರ್ ವಿಮಾನಗಳು ಪ್ರಪಂಚದಲ್ಲೆಲ್ಲಾ ಅತಿ ವೇಗವಾದವೆಂದು ಪ್ರಸಿದ್ಧವಾಗಿವೆ. ಇಂತಹವುಗಳನ್ನು ಅಮೆರಿಕಾದವರು ಸಾಲೊವರ್ಷನಲ್ಲಿ ಉಪಯೋಗಿಸುತ್ತಿರುವರು.

ಗಲಾಟೆಗೆ ಜವಾಬ್ದಾರರು ಯಾರು ?

ಇಂಡಿಯಾ ಸರ್ಕಾರದ ಪುಸ್ತಕದ ಪ್ರಕಟಣೆ

1942 ನೇ ಆಗಸ್ಟ್ 8 ರಲ್ಲಿ ಅಖಿಲ ಭಾರತ ಕಾಂ|| ಸಮಿತಿಯವರು ದೇಶದಲ್ಲಿ ಸಾರ್ವಜನಿಕ ಚಳುವಳಿಯನ್ನು ಸ್ಥಾಪಿಸಲು ಮಾಡಿದ ನಂತರ ನಡೆದ ಗಲಾಟೆಗಳಿಗೆ ಶ್ರೀ ಗಾಂಧೀಜಿ ಮತ್ತು ಕಾಂ|| ಅದ್ಯಕ್ಷರು ಎಷ್ಟರ ಮಟ್ಟಿಗೆ ಜವಾಬ್ದಾರರಿಂಬುವ ವಿಷಯಗಳನ್ನು ನಿರೂಪಿಸಿ ನ್ಯೂ ಡೆಯಲ್ಲಿ ಅಖಿಲ ಭಾ|| ನಲ್ಲಿ ಇಂಡಿಯಾ ಸರಕಾರದವರು ಒಂದು ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಇದು 86 ಪುಟಗಳುಳ್ಳದಾಗಿದೆ.

ಹೋಂ ಡಿಪಾರ್ಟ್‌ಮೆಂಟಿನ ಅಡಿಷನಲ್ ಸೆಕ್ರೆಟರಿಗಳಿಂದ ಸರ್ ರಿಚರ್ಡ್ ಟೂರ್ಟ್‌ಹಾಂರವರು ಪುಸ್ತಕಕ್ಕೆ ಬರೆದಿರುವ ಪೀಠಿಕೆಯಲ್ಲಿ ಅನೇಕ ಕಾರಣಗಳಿಂದ ಸರ್ಕಾರಕ್ಕೆ ಒಂದು ಕೋರಿಕೆಯಂತೆ ಪ್ರಕಟಿಸಲಾಗಿರುವುದೆಂದೂ, ಈ ವಿಷಯದಲ್ಲಿ ನಿರೂಪಿಸಿರುವ ಎಲ್ಲಾ ಅಂಶಗಳೂ ಜನರಿಗೆ ತಿಳಿದೇ ಇರುವುದೆಂದೂ ಈ ಪುಸ್ತಕದಲ್ಲಿರುವ ವಿಷಯಗಳಲ್ಲದೇ ಇನ್ನು ಅನೇಕ ವಿಷಯಗಳು ಸರ್ಕಾರಕ್ಕೆ ತಿಳಿದಿದ್ದು ಅದು ಈಗ ಪ್ರಕಟಿಸುವುದು ಪ್ರಕೃತವಾಗಿ ಕಂಡು ಬಂದಿಲ್ಲವೆಂದೂ ತಿಳಿಸಿರುವರು.

ಸಭಾ ಪರಿತ್ಯಾಗ

ಅಖಿಲ ಭಾ|| ಸ್ಟೇಟ್ ಕಾನ್ಫರೆನ್ಸಿನಲ್ಲಿ ಪ್ರೋಗ್ರೆಸಿವ್ ಪಾರ್ಟಿಯು ನುಬಂಡರಾದ ಶ್ರೀ ಕೃಷ್ಣಸ್ವಾಮಿಯು ಹೇಳಿಕೆಕೊಟ್ಟು ಮಹಾತ್ಮಾ ಗಾಂಧಿಯವರನ್ನು ಬಿಡುಗಡೆ ಮಾಡದಿರುವುದನ್ನು ಖಂಡಿಸಲು ನಾವು ಈ ದಿವಸದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಯಪಡಿಸಿ, ಪಾರ್ಟಿಯ ೬ ಮಂದಿ ಸಭಾ ಪರಿತ್ಯಾಗ ಮಾಡಿದರು.

ಜರ್ಮನರ ಕಡೆ ಇದುವರೆಗೆ 40 ಲಕ್ಷ ಸೈನಿಕರು ಮಡಿದಿರುವುದೆಂದು ತಿಳಿಯಬರುತ್ತೆ.

ಜಪಾನಿನ ಹತ್ತಿರ ಅಮೇರಿಕಾ ಸಬ್‌ಮೆರಿನ್‌ಗಳನ್ನಿಡಲಾಗಿವೆಯೆಂದು ತಿಳಿಯಬಂದಿದೆ. ಆದ್ದರಿಂದಲೇ ಪೆಸಿಫಿಕ್ಕಿನಲ್ಲಿ ಅನೇಕ ಜಪಾನೀ ಹಡಗುಗಳು ಮುಳುಗುತ್ತಿರುವುದಂತೆ.

ಜೇಸಿಗೆಯಲ್ಲಿ ರಷ್ಯಾದವರು ಭಾರಿ ಮುನ್ನುಗ್ಗಲು ವಿಸ್ತಾರು ಮಾಡುತ್ತಿದ್ದಾರೆ.

ವರ್ತಮಾನ

ವೈಸೂರು ದೇಶದ ಕೈಗಾರಿಕೆಯಲ್ಲಿ ಶೇಕಡ 42 ರಂತೆ ವೈಸೂರು ದೇಶದ ಕೂಲಿಯವಲ್ಲಿ ಬಂತೆಂದು ಮಿ|| ಪಿ. ಎಚ್. ಕೃಷ್ಣಂಗಾರಯರು ತಮ್ಮ ಸೆನಸೆಸ್ ವರದಿಯಲ್ಲಿ ಹೇಳಿರುತ್ತಾರೆ.

ಂ ಂ ಂ

ಅಮೇರಿಕನ್ ನಾವೆಗಳು ಹೇರಳವಾಗಿ ಯುದ್ಧ ಸಾಮಗ್ರಿಯನ್ನು ತುಂಬಿಕೊಂಡು ಉತ್ತರ ಆಫ್ರಿಕಾದಲ್ಲಿಳಿಸಿ, ಅಲ್ಲಿಂದ ಮೊಂಗನೀಸ್ ಮುಂತಾದ ಪದಾರ್ಥಗಳನ್ನು ತುಂಬಿಕೊಂಡು ಇಂಗ್ಲೆಂಡ್ ಅಮೇರಿಕಾ ತಲಪಿದವು.

ಂ ಂ ಂ

ಜರ್ಮನಿಯವು ರಷ್ಯಾದಲ್ಲಿ ಗೆದ್ದ ಭೂಪ್ರದೇಶದಲ್ಲಿ ರಷ್ಯನ್ ಭಾಷೆ ತಿಳಿದ ಜರ್ಮನ್ ಹೆಂಗಸರು ೨೧ ರಿಂದ ೪೫ ವರ್ಷದವರೆಗೆ ಇರುವವರನ್ನು ಸರ್ಕಾರಿ ಸೇವಕರಿಯಲ್ಲಿ ಸೇರಿಸುತ್ತಿರುವರು.

ಂ ಂ ಂ

ಒಂದು ಅತ್ಯಂತ ದೊಡ್ಡದಾದ ಅಮೇರಿಕಾದ ಸಬ್‌ಮೆರೈನು ನೀರಿನ ಸಾಲಾಟಿಕೆಂದು ತಿಳಿದು ಒರುತ್ತೆ.

ಂ ಂ ಂ

ಯುದ್ಧದ ಸಲಕರಣೆ ತಯಾರು ಮಾಡಲು ಪ್ರೋಗ್‌ನಲ್ಲಿದ್ದ 170 ಹೋಟಲ್ ಮುಚ್ಚಿ ಅಲ್ಲಿದ್ದ ಕೆಲಸಗಾರರನ್ನು ಕರೆದುಕೊಂಡಿರುವರು.

ಂ ಂ ಂ

ಆಸ್ಟ್ರೇಲಿಯಾದಿಂದ 66000 ಮಣ ಗೋಧಿಯು ಬಂಗಾಳಕ್ಕೆ ಬಂದಿದೆ. ಬಂದೇ ಸಲ ಇಷ್ಟು ಧಾನ್ಯವನ್ನು ಯಾವಾಗಲೂ ರಫ್ತು ಮಾಡಿರಲಿಲ್ಲ.

ಂ ಂ ಂ

ಬಲ್ಗೇರಿಯಾದಲ್ಲಿ ತುರ್ಕಿ ಗಡಿಯಲ್ಲಿರುವ ಎಲ್ಲಾ ತುರ್ಕಿಯರನ್ನು ಡೊಬ್ರುಜ್ಜಕ್ಕೆ ರವಾನಿಸಿರುತ್ತಾರೆ. ತುರ್ಕಿಯವರ ದನಕರುಗಳನ್ನು ಸರ್ಕಾರದವರು ವಶಪಡಿಸಿಕೊಂಡಿರುತ್ತಾರೆ. ರಾಸುಗಳ ಖರೀದಿ ದ್ರವ್ಯ ರೂಪದಲ್ಲಿ ಕೊಡುತ್ತಾರಂತೆ.

ಂ ಂ ಂ

ಮದ್ರಾಸಿನಲ್ಲಿ ಫ್ಲಷ್ ಸಿಸ್ಟಂ ಕಕ್ಕಸ್ಸನ್ನು ಕಟ್ಟಿಸಲು ಅಲ್ಲಿ ಮುನಿಸಿಪಾಲಿಟಿಯವರು ೨೦ ಸಾವಿರ ರೂಪಾಯಿ ಸಾಲ ತೆಗೆಯಲು ಅನುಮತಿ ಕೊಟ್ಟಿದ್ದಾರೆ.

ಂ ಂ ಂ

ನಾರ್ವೆಯಲ್ಲಿ ಜನರೆಲ್ಲರೂ ಯುದ್ಧಕ್ಕೆ ಸೇರಬೇಕೆಂದೂ ಗಂಡಸರ ವಯಸ್ಸು 18 ರಿಂದ 55 ವರ್ಷದವರೂ, ಹೆಂಗಸರು 21 ರಿಂದ 40 ವರ್ಷದವರಿಗೆ ಆಜ್ಞೆಯಾಗಿದೆ.

ಂ ಂ ಂ

ಎಲ್ಲಾ ರಾಷ್ಟ್ರಗಳೊಂದಿಗೂ ಸ್ನೇಹದಿಂದಿರಬೇಕೆಂದಿರುವುದೇ ಟರ್ಕಿಯ ಆಶಯವೆಂದು ಅಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ.

ಇಟಲಿಯ ಯುದ್ಧಗಳು

ಮುಸೋಲಿನಿಯ ಬಡಾಯಿ!

ಮುಸೊಲಿನಿಯು ತನ್ನ ಸೈನ್ಯಗಳಿಗೆ ಇಟಲಿಯವರ ಪೂರ್ವಕಥೆಗಳನ್ನು ಹೇಳಿ ಬೆರಗು ಮಾಡುತ್ತಿರುವನು. ಇಟಲಿಯು ಹಿಂದೆ ರೋಮ್ ಚಕ್ರಾಧಿಪತ್ಯವಾಗಿದ್ದಾಗ ಎಷ್ಟು ವಿಸ್ತೀರ್ಣವಾಗಿತ್ತು, ಇಟಲಿ ಶಕ್ತಿ ಸಾಹಸವೇನಾಗಿತ್ತು, ಎಂಥೆಂಥಾ ಯುದ್ಧಗಳಲ್ಲಿ ಜಯಶೀಲರಾದರು, ಸಾವು ನೋವುಗಳು ಎಷ್ಟು ಅಲ್ಪ ಎಂದು ಹೇಳುವುದು. (ಇದನು ಹೇಳುವ ಕಥೆಗಳು 1467) ನೆನಿಸಿಯವರಿಗೂ ವೋರೆಟ್‌ನ ವರಿಗೂ ಯುದ್ಧವಾಯಿತು. ಒಬ್ಬಬ್ಬರು ಒಂದೊಂದು ಹಳ್ಳಿಯಲ್ಲಿದ್ದುಕೊಂಡು ಬೆದರಿಸತೊಡಗಿದರೆ ವಿನಃ ಯುದ್ಧ ಮಾಡಲಿಲ್ಲ. ಯಾವದೋ ಒಂದು ದಿವಸ ಇಬ್ಬರು ಸೇರಿದರು. ಯುದ್ಧ ೧೫ ಘಂಟೆ ಕಾಲ ನಡೆಯಿತು, ಎರಡು ಕಡೆಯೂ ಕೆಲವರನ್ನು ಸೆರೆ ತೆಗೆದುಕೊಂಡರು, ಕೆಲವು ಕುದುರೆಗಳು ಮಾತ್ರ ಘಾಯಗೊಂಡವು, ಒಬ್ಬನೂ ಸಾಯಲಿಲ್ಲ.

ಇನ್ನೊಂದು ಯುದ್ಧದಲ್ಲಿ ಅಂದರೆ, ಜೋಗೋನೇರಾದಲ್ಲಿ ನಡೆದದನ್ನು, ಒಂದೊಂದು ಕಡೆ 20,000 ಸೈನ್ಯಗಳು. ಹೊಡೆದಾಡಿದವು, ಈ ಯುದ್ಧದಲ್ಲಿ ವೀರರು ಮೂರು ಮಂದಿ ಮಾತ್ರ. ಮತ್ತೊಂದು ಯುದ್ಧ ವರ್ಕಸಲ್ಲಿ ನಡೆದದ್ದು. ಇದು 7 ಗಂಟೆಗಳ ಕಾಲ ಮಾತ್ರ. ಇದರಲ್ಲಿ ನತ್ಯವನು ಒಬ್ಬನೇ. ಇವನು ಕುದುರೆಯಿಂದ ಬಿದ್ದು ಪ್ರಾಣಬಿಟ್ಟನು.

ಬೆರ್ಲಿ ವಿದ್ಯಾರ್ಥಿಗಳು

ಹಿಂದುಸ್ಥಾನದಿಂದ ಇಂಗ್ಲೆಂಡಿಗೆ ಹೋಗಿ ಯಂತ್ರಗಳ ರಚನೆಯನ್ನು ಕಲಿಯುವ ವಿದ್ಯಾರ್ಥಿಗಳು ಪ್ರತಿ ವಾರವೂ ಲಂಡನ್ನಿಗೆ ಒಬ್ಬರು. ಇಲ್ಲಿ ನೋಡಬೇಕಾದ ಸ್ಥಳಗಳನ್ನು ನೋಡುವರು. ಇವರಿಗೆ ಅಲ್ಲಿರುವ ಹಿಂದೂಸ್ಥಾನದ ಸಂಸ್ಥೆಗಳು ಸತ್ಕಾರ ಮಾಡುವರು. ದ್ರವ್ಯವಿಲ್ಲದೆ ಜೋಡು ಬೀಳೇರಿ ಮಾಡಿಕೊಡುವುದು, ಔಷಧಿ ಕೊಡುವುದು, ಹಳ್ಳಿಗಳನ್ನು ನೋಡಲು ಹೋದಾಗ ಟೀವಾರ್ಟಿಗಳನ್ನು ಕೊಡುವುದು, ಇವರಿಗೆ ಏನೇನೋದಗೊಳಿಸಲು ಟೆನ್ನಿಸ್, ಕ್ರಿಕೆಟ್ ಆಟಗಳನ್ನು ಇವರ ಸಂಗಡ ಆಡುವುದು. ಸಿನಿಮಾಗಳಿಗೆ ಇವರುಗಳಿಗೆ ದರ ಕಮ್ಮಿ. ಕೆಲವು ಸಲ ಇವರೆ ಏರ್ಪಾಡು ಮಾಡಿಕೊಂಡು ತಮ್ಮ ಮನೆಯಲ್ಲಿ ಊಟಮಾಡುತ್ತಿದ್ದು ಅಡಿಗೆಯನ್ನು ಮಾಡಿಕೊಳ್ಳುವದು,

ರಷ್ಯಾ ದೇಶದ ಸಂಪತ್ತು

ಕಾಳುಗಳು, ದನಕರು, ಎಣ್ಣೆಸು, ಮರ, ಇಜ್ಜಲು, ಎಣ್ಣೆ, ಬೀಟನ ಸಕ್ಕರೆ, ಹತ್ತಿ, ಹಣ್ಣು ಇವು ರಷ್ಯಾದ ಸಂಪತ್ತು. ತಮಗೆ ಹೆಚ್ಚಾದುದನ್ನೆಲ್ಲಾ ರಫ್ತು ಮಾಡುತ್ತಾರೆ. ನವೀನ ರೀತಿಯಲ್ಲಿ ವ್ಯವಸಾಯ-ಮಾಡುವರು. ಹೆಚ್ಚು ಬೆಳೆ ತೆಗೆಯಲು ಸಮ. ಹಿಂದೆ ಬಂಜರಾಗಿದ್ದ ವ್ಯವಸಾಯಕ್ಕೆ ಅನುಪಯುಕ್ತವೆಂದು ತಿಳಿದುಕೊಂಡಿದ್ದ ಸೈಬೀರಿಯಾ ಉತ್ತರ ಪ್ರದೇಶಗಳಲ್ಲಿ ಲಕ್ಷಾಂತರ ಎಕರೆ ಜಮೀನು ಈಗ ವ್ಯವಸಾಯದಲ್ಲಿದೆ. ಹಣ್ಣುಗಳನ್ನು ಡಬ್ಬಿಗಳಲ್ಲಿ ತುಂಬಿ ರಫ್ತು ಮಾಡುವ ಕಾರ್ಖಾನೆಗಳು ವಿಶೇಷವಾಗಿರುವುವೆ. ಸೈಬೀರಿಯಾ ಮಂದಿವು ಉತ್ತಮವಾದುದು. ಇವನ್ನು ಬಿಳಿ ಇಂಗ್ಲೆಂಡ್ ಮುಂತಾದ ಏಶ್ಯ ಪಕ್ಷದವರಿಗೆ ಕಳುಹಿಸುತ್ತಿರುವರು. ತೊಲೆಗಳನ್ನು ನದಿಯಲ್ಲಿ ತೇಲು ಬಿಡುವುದು. ಅಲ್ಲೆಲ್ಲಾ ಮರದ ಕಾರ್ಖಾನೆಗಳಿರುವುವು. ಇಲ್ಲಿ ಹಲಗೆಗಳನ್ನು ಮಾಡುವರು. ನದಿಯ ಪಕ್ಕದಲ್ಲಿ ಮಧ್ಯ ಏಷ್ಯಾ, ಟ್ರಾನ್ಸ್ ಕಾಕ್ಸಸ್ ಇವೆ ಹಣ್ಣು, ಟೀ, ಹೊಗೆಸೊಪ್ಪಿಗೆ ಮಾತ್ರ ಸ್ಥಾನದವೇ ತವ್ಮ ಟೀಯನ್ನು ಇತರ ದೇಶದಿಂದ ತರುತ್ತಿದ್ದರು. ಈಗ ಜಾರ್ಜಿಯಲ್ಲಿ ಬೆಳೆಯುವ ಟೀಯು ರಷ್ಯಾಕ್ಕೆ ಅಗಿ ಇತರ ದೇಶಕ್ಕೆ ರಫ್ತು ಮಾಡುವರು. ದ್ರಾಕ್ಷಿಯ ಬೆಳೆಯನ್ನು ಹೆಚ್ಚಿಸಿ, ತವ್ಗೆ ಬೇಕಾದ ಸಾರಾಯಿಯನ್ನು ಮಾಡಿಕೊಳ್ಳುವರು. ದ್ರಾಕ್ಷಿ ತೋಟದಲ್ಲಿ ಹುಳು ಹುಪ್ಪಡಿಗಳಂತೆ ದ್ರಾವಕಗಳನ್ನು ವಿಮಾನಗಳಲ್ಲಿ ಚಲ್ಲುವರು.

ಅಕ್ಕಿ ಮೂಟೆಗಳ ಪತ್ತೆ

ಬೆಂಗಳೂರು ಸೆಲ್ಲಾನ್‌ಪೇಟೆ ಚೌಕದಲ್ಲಿರುವ ಗಜಾನನಸಭವನ ಹೋಟಲಿನ ವಾಲೀಕರಾದ ಶ್ರೀ|| ಹೆಚ್ ನಾರಾಯಣರವರು ತಮ್ಮಲ್ಲಿ ಅಕ್ಕಿ ಇದ್ದರೂ ಇಲ್ಲವೆಂದು ಹೇಳಿ ಹೋಟಲಿಗೋಸ್ಕರ ಅಕ್ಕಿ ಮೂಟೆಗೆ ಕೂಪನ್ ತೆಗೆದುಕೊಂಡಿದ್ದರೆಂದೂ ಅಸ್ಪಂಲ್ಲೇ ಫುಡ್ ರೇಷನ್ ಶಾಖೆಯ ಡಿಟೆಕ್ಟಿವ್‌ಗಳು ಅಜನಾಯಿಷಿ ಮಾಡಿದಾಗ ಅವರ ಮನೆಯಲ್ಲಿ ೧೫೫ ಪಲ್ಲ ಅಕ್ಕಿ ಮೂಟೆಗಳು ಇದ್ದುದು ಪತ್ತೆಯಾಯಿತೆಂದೂ ವರದಿಯಾಗಿದೆ.

ಅವೆನ್ಯೂ ರಸ್ತೆಯಲ್ಲಿರುವ ಚಂದ್ರಭವನದ ಗೋಡೌನಿನಲ್ಲಿ ಫುಡ್ ಶಾಖೆಯ ಡಿಟೆಕ್ಟಿವ್‌ಗಳು ಮೊನ್ನೆ ಅಜಮಾಯಿಷಿ ಮಾಡಿದಾಗ ೧೦೯ ಅಕ್ಕಿ ಮೂಟೆಗಳು ೨೩ ಮೂಟೆಯಷ್ಟು ಸಕ್ಕರೆಯೂ ಪತ್ತೆಯಾಯಿತೆಂದೂ ವರದಿಯಾಗಿದೆ. ಮುಂದಿನ ತನಿಖೆಕ್ರನು ನಡೆಯುತ್ತಿದೆ.

ಪ್ಲೈವುಡ್ ಟೈರ್

ಅಮೇರಿಕಾದಲ್ಲಿ ರಬ್ಬರ್‌ಗೆ ಅಭಾವವಾಗಿರುವುದರಿಂದ ಮೋಟಾರ್ ಚಕ್ರಗಳಿಗೆ ಪ್ಲೈವುಡ್‌ನಿಂದ ಮಾಡಿದ ಟೈರುಗಳನ್ನು ಉಪಯೋಗಿಸುವರು. ಇವು ರಬ್ಬರ್ ಟೈರ್‌ಗಳಿಗಿಂತ ಹೆಚ್ಚು ದಿವಸ ಬಾಳಿಕೆ ಬರುವುದಂತೆ. ಇವನ್ನು ಇಂಡಿಯಾದಲ್ಲಿ ಈಗ ಪರೀಕ್ಷಿಸುತ್ತಿರುವರು. ನಮ್ಮ ದೇಶವು ಉಷ್ಣದೇಶವಾದ್ದರಿಂದ ಈ ಪ್ಲೈವುಡ್ ಟೈರು ಎಷ್ಟರಮಟ್ಟಿಗೆ ಅನುಕೂಲಗುತ್ತದೋ ನೋಡಬೇಕು!

ಪುಸ್ತಕಗಳಿಗೆ ಓಟುಗಳು

ಹಿಂದೂಸ್ಥಾನದ ವಿವಿಧಗಳನ್ನು ಒಳಗೊಂಡ ೩೦೦ ಪುಸ್ತಕಗಳ ಪಟ್ಟಿಯನ್ನು ಕೊಟ್ಟು ಇದರಲ್ಲಿ ಅತ್ಯುತ್ತಮವಾದ ಹದಿನೈದು ಪುಸ್ತಕಗಳನ್ನು ಜನಾಯಿಸುವ ಸ್ಪರ್ಧೆಯಲ್ಲಿ 154 ಜನರು ಭಾಗ ವಹಿಸಿದ್ದರು. ಇವರಲ್ಲಿ ನೆಪರುಯವರ ಚರಿತ್ರೆಗೆ ೧೦೩ ಓಟು. ಗಾಂಧಿ ಮಹಾತ್ಮನವರ ನಮ್ಮ ಹಿಂದೂಸ್ಥಾನಗಳಿಗೆ ತಲಾ ೭೦ ಓಟುಗಳೂ, ಗೀತಾಂಜಲಿಗೆ ೫೦ ಓಟುಗಳು ಒಂದವು.

ಕಾರ್ಮಿಕರು ಸುರಕ್ಷಿತವಾಗಿ ಸೇರಿದವು

ಹೊಸ ತಿಂಗಳು ರಷ್ಯಾಕ್ಕೆ ಕಳುಹಿಸಿದ ಸಾಮಾನುಗಳು ಶೇಕಡ ೧೦ ರಂತೆ ಹೆಚ್ಚಿದೆ. ಡಿಸಂಬರ್, ಜನವರಿಯಲ್ಲಿ ಕಳುಹಿಸಿದ ಎಲ್ಲಾ ಸಾಮಾನು ಸಾಗಿಸುವ ಹಡಗುಗಳು ಸುರಕ್ಷಿತವಾಗಿ ರಷ್ಯಾ ಸೇರಿದವು ಈಗ ಕಳುಹಿಸುತ್ತಿರುವ ಸಾಮಾನುಗಳನ್ನು ಮೂರನೇ ಎರಡು ಭಾಗ ಅಮೇರಿಕಾದ ಹಡಗುಗಳಲ್ಲಿ ಕಳುಹಿಸಲಾಗುತ್ತಿದೆ ಎಂದು ಮಿ|| ರೂಸವೆಲ್ಟರು ಹೇಳಿರುವರು

ಯುದ್ಧದ ಖರ್ಚು

ಹಿಟ್ಲರನ ಪೊಳ್ಳು ತೃಷ್ಣೆಯು ಕಾರಣವಾಗಿ ಇದುವರೆಗೂ ಪ್ರಪಂಚವು 40000 ಕೋಟಿ ಡಾಲರುಗಳಿಗಿಂತ ಹೆಚ್ಚಾಗಿ ಯುದ್ಧಕ್ಕೆ ವೆಚ್ಚ ಮಾಡಿರುವುದೆಂದು ಅಮೆರಿಕ ಸರ್ಕಾರದ ವಾಣಿಜ್ಯ ಶಾಖೆಯು ತಿಳಿಸಿದೆ. ಇನ್ನೊಂದು ವರ್ಷದೊಳಗಾಗಿ ಹಿಟ್ಲರನ ಪತನವಾಗದಿದ್ದಲ್ಲಿ ಯುದ್ಧ ವೆಚ್ಚವು ಮಾತ್ರ 50000 ಕೋಟಿ ಡಾಲರುಗಳಿಗಿಂತ ಹೆಚ್ಚುವುದು. ಬ್ರಿಟಿಷ್ ರಾಜ್ಯಗಳೂ, ಸಂಸಾಜಿತ ರಾಜ್ಯಗಳೂ ಮಿತ್ರ ರಾಜ್ಯಗಳು ಇವೆಲ್ಲವೂ ಕಲೆತು ಇಷ್ಟು ಹಣವನ್ನು ವ್ಯಯ ಮಾಡುತ್ತಿರುವ ದೆಂದು ಅರಿಯತಕ್ಕದ್ದು.

ಆಕ್ಸಿಸ್ ಘಾಯಾಗ್ರಹಗಳಿಗೆ ಜರ್ಮನಿ ವಿಚ್ಛೇರಿಕೆ

ಇಟಲಿ, ರೋಮೇನಿಯಾ, ಹಂಗೇರಿ ಮತ್ತು ಸ್ಲೋವಾಕ್ ಸರಕಾರಗಳು ಕೂಡಲೇ ಸಂಪೂರ್ಣ ಸೈನ್ಯ ಬಮಾವಣೆ ಮಾಡಬೇಕೆಂದೂ ತಪ್ಪಿದಲ್ಲಿ ಅವಶ್ಯಕವಾದ ಆರ್ಥಿಕ ಮತ್ತು ಮಿಲಿಟರಿ ಕಾರ್ಯವನ್ನು ಜರ್ಮನಿಯು ಕೈಗೊಳ್ಳುವುದೆಂದೂ ಆ ಸರಕಾರಗಳಿಗೆ ಜರ್ಮನ್ ಎಚ್ಚರಿಕೆಯಾಗಿರುವುದೆಂದು ರಷ್ಯಾ ವಾರ್ತಾ ಸಂಸ್ಥೆ ಸುದ್ದಿ.

ರೈಲು-ಆದಾಯಕ್ಕೋ, ಜನರ ಅನುಕೂಲಕ್ಕೋ?

ಈ ವರ್ಷ ರೈಲ್ವೆ ಹುಟ್ಟುವಳಿ ೩೬ ಕೋಟಿ, ರೈಲ್ವೆ ಟಿಕೀಟಿನ ಮತ್ತು ಸಾಮಾನು ಸಾಗಿಸುವ ಭಾರ್ಜು ಏರಿಸಿದ್ದರಿಂದ ಬಡವರಿಗೆ ತುಂಬಾ ತೊಂದರೆಯಾಗಿದೆ. ಗವರ್ನಮೆಂಟಿನವರು ವ್ಯಾಪಾರ ಮಾಡುವುದಕ್ಕೆಲ್ಲ ಜನರ ಅನುಕೂಲಕ್ಕೆ ರೈಲ್ವೆ ಇರುವುದೆಂದು ಮಿ|| ಜಮಾನ್‌ದಾಸ್ ಮೋಘಾರವರು ಅಸೆಂಬ್ಲಿಯಲ್ಲಿ ಹೇಳಿರುವರು.

ಫ್ರೆಂಚರೆಲ್ಲ ಇಟಲಿ ಜನ್ಮಾಂಗಕ್ಕೆ ಸೇರಬೇಕು

ಫ್ರಾನ್ಸಿನ ಸವಾಯ್ ಡಿಸ್ಟ್ರಿಕ್ಟಿನಲ್ಲಿ ನೂರಎಲ್ಲಾ ಫ್ರೆಂಚ್ ಪ್ರಜೆಗಳೂ ಇಟಾಲಿಯನ್ ಜನಾಂಗಕ್ಕೆ ಸೇರತಕ್ಕದ್ದೆಂದು ಅಜ್ಞೆಯಾಗಿರುವುದಾಗಿ ಜನರಲ್ ಗಿರೋರವರ ಕಡೆಯವರು ಹೇಳಿರುವುದಾಗಿ ಪಲ್ಟೀರ್ ರೇಡಿಯೋ ಸುದ್ದಿ.

ಬೊಂಬಾಯಿ ಸರ್ಕಾರದವರ ಸಹಾಯ

ಪೂನಾದಲ್ಲಿ ಕಳೆದ ಆಗಸ್ಟ್ ತಿಂಗಳಲ್ಲಿ ಜೊಂಪಿಗಾರರನ್ನು ಚದುರಿಸುವ ಕಾಲದಲ್ಲಿ ಮರಣವಾದ ದಾವಲೇ, ಜೋಷಿ ಮತ್ತು ಸಾಲುಂಕೆ ಎಂಬುವರ ಮನೆಯವರಿಗೆ ರೂ. 1500, 5000, ಮತ್ತು 1000 ದಂತೆ ಸಹಾಯ ಮಾಡಲು ಬೊಂಬಾಯಿ ಸರ್ಕಾರದ ಆರ್ಡರಾಗಿದೆ.

ಸಂಸ್ಕೃತ ಮತ್ತು ಹಿಂದೀ ಶರಗತಿ ವಜಾ ಮಾಡಲಾಗುವುದೇ?

ಗುಂಟೂರು ಬೋರ್ಡ್ ಸ್ಕೂಲಿನಲ್ಲಿ ಮುಂದಿನ ವರ್ಷದಿಂದ ಸಂಸ್ಕೃತ ಮತ್ತು ಹಿಂದೀ ಶರಗತಿ ವಜಾ ಮಾಡಲು ಅಜ್ಞೆ ಮಾಡಿರುವ ಬೋರ್ಡ್ ಅಫೀಸರಿನ ತೀರ್ಮಾನವು ಜಿಲ್ಲಾಲಾದಲ್ಲಿ ನಡೆದ ಮಾಟಿಂಗಿನಲ್ಲಿ ಖಂಡಿಸಲಾಗಿದೆ.

ನೋಣವು ಮೊಟ್ಟೆ ಇಡುವುದು

ಒಂದು ಜೊತೆ ನೋಣವು ಎದು ತಿಂಗಳಿಗೆ 23,000,000 ಮೊಟ್ಟೆಗಳನ್ನು ಇಡುವುದು.

ಅಹಂ ಬ್ರಹ್ಮ

ಒಬೆದವನು—"
"ನಾನು"

೬. ನೀನು ಯಾರು ?

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ನೀನಾರೋ ನಾನರಿಯೆನು, ನೀನೇಕೆ ನನ್ನನು ಕರೆಯುತ್ತಿರುವೆಯೋ ನಿನ್ನಿಂದ ನಿನಗೇನಾಗಬೇಕಾಗಿರುವುದೋ ನಾನರಿಯೆನು. ನಾನೇ ಸರ್ವಸ್ವನೆಂದು ಹೇಳುವೆ. ಎಲ್ಲೆಲ್ಲಿಯೂ ಇರುವೆನೆನ್ನುವೆ, ಎಲ್ಲವೂ ನಾನೆನ್ನುವೆ. ಎಲ್ಲವೂ ನೀನೇ ಆದರೆ ಈ ಪ್ರಪಂಚದ ವಿಚಿತ್ರ ವ್ಯಾಪಾರಗಳ ರಹಸ್ಯವೇನು ?

ಒಬ್ಬನು ಸುಖಿ ; ಒಬ್ಬನು ದುಃಖಿ ಒಬ್ಬನು ಶ್ರೀಮಂತ, ಒಬ್ಬನು ಬಡವ ; ಒಬ್ಬನು ಸುರಸಿಪ್ಪೆ, ಒಬ್ಬನು ಕುರೂಪಿ ; ಒಬ್ಬನು ರೋಗಿ , ಒಬ್ಬನು ಭೋಗಿ ; ಒಬ್ಬನು ಸ್ವತಂತ್ರ, ಒಬ್ಬನು ಅಸ್ವತಂತ್ರ ; ಒಬ್ಬನು ರಾಜ, ಒಬ್ಬನು ಪ್ರಜೆ ; ಒಬ್ಬನು ಅಧಿಕಾರಿ, ಒಬ್ಬನು ಭಿಕಾರಿ ; ಈ ವಿಧವಾದ ವ್ಯತ್ಯಾಸಕ್ಕೆ ಕಾರಣವೇನು ?

ಎಲ್ಲರಲ್ಲಿಯೂ ನೀನು ಇರುವುದಾದರೆ ನನ್ನಲ್ಲಿಯೂ ಇರಲೇಬೇಕು. ಅಂದ ಮೇಲೆ ನೀನಿದ್ದೂ ನಾನು ಹುಟ್ಟಿ ಸಾಯುವುದೇಕಕ್ಕೆ ? ಈ ಕಷ್ಟಸುಖಗಳ ತಾರತಮ್ಯವೇಕಕ್ಕೆ ? ಈ ಜಾತಿ ಮತಗಳ ಭೇದವೇಕಕ್ಕೆ ?

ನೀನು ಯಾರು ? ಎಲ್ಲರಿಗಿಂತಲೂ ನಾನೇ ಹೆಚ್ಚಿನವನೆ ಹಾಗಾದರೆ ಜನರು ನಾನು ಹೆಚ್ಚು ತಾನು ಹೆಚ್ಚೆಂದು ಒಡಿದಾಡಿ ವ್ಯರ್ಥವೇಕಕ್ಕೆ ? ನಾನೇ ಸರ್ವಶಕ್ತನೆನ್ನುವೆ ಆದರೆ ನಿನ್ನ ಶಕ್ತಿಯು ನಮ್ಮ ಶಕ್ತಿಯು ಮುಂದೆ ವ್ಯರ್ಥವಾಗದಿರಲು ಕಾರಣವೇನು ? ನಿನ್ನ ಸಂಕಲ್ಪದಿಂದಲೇ ಎಲ್ಲವೂ ನಡೆಯುವುದೆನ್ನುವೆ ಹಾಗಾಗಿದ್ದರೆ ನನ್ನ ಸಂಕಲ್ಪಗಳು ವಿಕಲ್ಪವಾಗುವ್ಯದೇಕಕ್ಕೆ ? ಎಲ್ಲರಿಗೂ ಹಿತವನ್ನೇ ಬಯಸುವೆನೆನ್ನುವೆ ? ಹಾಗಿದ್ದರೆ ಜನರು ದುಃಖಸಾಗರದಲ್ಲಿ ನಿರಂತರವೂ ಮುಳುಗೇಳುತ್ತಿರುವ್ಯದೇಕರಿಂದ ? ನಾನೊಬ್ಬನೇ ಎನ್ನುವೆ ಹಾಗಿದ್ದರೆ ಈ ಅಸಂಖ್ಯಾತ ದೇವರುಗಳ ಪಾಡೇನು ?

ಹುಟ್ಟದೆ ಸಾಯುವನೊಬ್ಬ ; ಹುಟ್ಟಿ ಸಾಯುವನೊಬ್ಬ ; ಬೆಳೆದು [illegible]ಯುವನೊಬ್ಬ ; ಉಳಿದು ಸಾಯುವನೊಬ್ಬ ಈ ಹುಟ್ಟು ಸಾವುಗಳ ಅರ್ಥವಾದರೂ ಏನು ?

ಹುಟ್ಟಿದ ಮೇಲೆ ಸಾಯಲೇ ಬೇಕೆಂಬ ನಿರ್ಬಂಧವೇಕಕ್ಕೆ ? ಅಥವಾ ಸತ್ತ ಮೇಲೆ ಪುನಃ ಹುಟ್ಟಲೇಬೇಕೆಂಬ ಬಲವಂತವೇನಾದರೂ ಉಂಟೆ ?

ಒಬ್ಬೊಬ್ಬನು ಒಂದೊಂದು ದೇವರನ್ನು ಪೂಜಿಸುವನು ಪ್ರತಿಯೊಬ್ಬನೂ ತನ್ನ ದೇವರೇ ಹೆಚ್ಚು ಬಸ್ತುವನು. ನೀನೇ ನಿಜವಾಗಿಯೂ ಆ ದೇವರಾಗಿದ್ದರೆ ಅಥವಾ ಆ ದೇವರ ಕೂಟದಲ್ಲಿ ನೀನೂ ಒಬ್ಬನಾಗಿದ್ದರೆ ನಿಜವಾಗಿ ಹೇಳು ನೀನು ಯಾರು ? ನಿನ್ನ ಹೆಸರೇನು ನಿನ್ನ ತಂದೆತಾಯಿಗಳಾರು ನಿನ್ನ ಜಾತಿ ಮತಗಳೇನು ? ನಿನ್ನ ನಿರ್ದಿಷ್ಟವಾದ ವಾಸಸ್ಥಾನವಾದರೂ ಯಾವುದು ? ನಿನ್ನಂತೆಯೇ ನಾನೇ ಹೆಚ್ಚೆಂದು ಜೋಳಿಕೊಳ್ಳುವ ಆ ಇತರ ದೇವರುಗಳ ಪಾಡೇನು ? ನಿನ್ನನ್ನು ನಾನು ಯಾವ ಹೆಸರಿನಿಂದ ಕರೆಯಲಿ !

ನೀನು ಯಾರು ? ನಿನ್ನನ್ನು ನೋಡಬೇಕೆಂದು ನಾನು ದೇಶ ದೇಶಗಳನ್ನು ಸುತ್ತಿದೆನು. ಬೆಟ್ಟ ಗುಡ್ಡಗಳಲ್ಲಿ ಹುಡುಕಾಡಿದೆನು. ಕಾಡ ಮೇಡುಗಳಲ್ಲಿ ಅಲೆದಾಡಿದೆನು; ತೀರ್ಥ ಕ್ಷೇತ್ರಗಳಲ್ಲಿ ಕಂಡು ಕಾಣದವನೆಲ್ಲಾ ಕೇಳಿದೆನು. ಅಲೆದಲೆದು ಬೇಸತ್ತೆನು. ನಿನ್ನನ್ನು ಎಲ್ಲಿಯೂ ನಾನು ಕಾಣಲಿಲ್ಲ. ಹೀಗೆ ನೀನು ಕಲ್ಪನೆಂತೆ ಯಾರಿಗೂ ಸಿಕ್ಕದೆ ಯಾರ ಕಣ್ಣಿಗೂ ಕಾಣಿಸದೆ ಮರೆಯಾಗಿರುವುದೇಕಕ್ಕೆ ?

ನನ್ನನ್ನು ನಂಬು ನನ್ನಲ್ಲಿಯೇ ಸರ್ವಸ್ವವನ್ನೂ ಅರ್ಪಿಸು ಎನ್ನುವೆ

ನಿನ್ನನ್ನು ಅರಿಯದೆ ನಾನು ನಿನ್ನನ್ನು ನಂಬುವುದು ಹೇಗೆ ? ನಿಜೀವವಾದ ಕಲ್ಲಿನ ವಿಗ್ರಹಗಳ ರೂಪದಲ್ಲಿ ಮಾತ್ರವೇ ಪೂಜೆಯನ್ನು ಕೈಗೊಳ್ಳುತ್ತಿರುವೆಯಲ್ಲಾ ಈ 'ಪೂಜೆ' ಪ್ರಯೋಜನವಾದರೂ ಏನು ? ಕಲ್ಲಿಗೆ ಪೂಜೆ ಮಾಡಿ ಕಲ್ಲಿಗೆ ನೈವೇದ್ಯ ಮಾಡಿ ಭಕ್ಷಿಸಿದ ಪಾತ್ರಕ್ಕೂ ಅದು ಪೂಜೆಯೆನಿಸುವುದೇ ? ಸಜೀವನಾದ ನನ್ನಿಂದ ಆಗದ ಕೆಲಸವು ನಿರ್ಜೀವವಾದ ಆ ಕಲ್ಲಿನಿಂದ ಆಗಬಲ್ಲದೇ ?

ಎಲ್ಲವನ್ನೂ ನನಗೆ ಅರ್ಪಿಸೆನ್ನುವೆ ; ನೀನು ಯಾರೆಂಬುದನ್ನೇ ಅರಿಯದ ನಾನು ಸರ್ವಸ್ವವನ್ನೂ ನಿನಗೆ ಅರ್ಪಿಸುವುದೆಂತು ? ನಿಜೀವನಾದ ನೀನು ಅದನ್ನು ಹೇಗೆ ಸ್ವೀಕರಿಸುವೆ ? ಎಲ್ಲವನ್ನೂ ನಿನಗೆ ಕೊಟ್ಟರೆ ನನಗೆ ಉಳಿಯುವುದೇನು ? ಎಲ್ಲವನ್ನೂ ಕೊಟ್ಟ ಮೇಲೆ ನನ್ನ ಗತಿಯೇನು ? ನನ್ನನ್ನೇ ಸಂಬುವವರ ಗತಿಯೇನು ?

ಎಲವೋ ನೀನಾದರೋ ಅಗೋಚರನಾಗಿರುವೆ ; ನಾನು ಗೋಚರನಾಗಿರುವೆನು, ರಾತ್ರಿಯಲ್ಲಿ ಕಂಡ ಭಾವಿಯಲ್ಲಿ ಹಗಲು ಬಿದ್ದಂತೆ ಕಯ್ಯಲ್ಲಿದ್ದ ಗಂಟನ್ನು ಕಳೆದುಕೊಂಡು ಕನಸಿನ ಗಂಟನ್ನು ನೆಚ್ಚಿಕೊಂಡಂತೆ. ಪ್ರತ್ಯಕ್ಷವಾಗಿ ನನ್ನದಾಗಿ

ಮುಖ್ಯ ವಿದ್ಯಾಸೂತ್ರ

ಅಧುನಿಕ ವಿದ್ಯಾವಿಧಾನದಲ್ಲಿ ಯಾವುದಾದರೂ ಒಂದು ವಿಷಯದ ಕಡೆ ಹೆಚ್ಚು ಗಮನವನ್ನು ಕೊಟ್ಟು ಆ ವಿಷಯದಲ್ಲಿ ಪ್ರತ್ಯೇಕ ಪರಿಜ್ಞಾನವನ್ನು ಪಡೆಯುವಿಕೆಯು ಆಧುನಿಕ ವಿದ್ಯಾರ್ಥಿಯ ಆಶಯವಾಗಿರುತ್ತದೆ. ಈ ಬಗೆಯಲ್ಲಿ ಪ್ರತ್ಯೇಕ ಪರಿಜ್ಞಾನಕ್ಕಾಗಿ ಧುಡಿಯುವ ವಿಶಾಲವಿಜ್ಞಾನವನ್ನು ಪಡೆಯಲು ತಮ್ಮ ಶಕ್ತಿಯನ್ನು ವಿದ್ಯಾರ್ಥಿಗಳು ವಿನಿಯೋಗಿಸಬೇಕೆಂದು ಶಂ. ಸಿ.ವಿ. ರಾಮರ್ ರವರು ಈಚೆಗೆ ಅವರು ಮಾಡಿದ ಒಂದು ಉಪನ್ಯಾಸದಲ್ಲಿ ತಿಳಿಸಿರುವರು. ಭಾರತದೇಶದಲ್ಲಿ ಕಾಳಿದಾಸ, ಪಾಣಿನಿ, ಪತಂಜಲಿಗಳಂಥಾ ಮೇಧಾಸಂಪನ್ನರು ಜನಿಸಿದರೆಂದೂ ಅವರಿಗಿಂತ ಘನತರವಾದ ಪ್ರಜ್ಞೆಯುಳ್ಳವರು ಜನ್ಮವೆತ್ತಬೇಕೆಂದೂ, ಈ ಆಶಯದ ಸಿದ್ಧಿಗಾಗಿ ವಿದ್ಯಾರ್ಥಿಗಳು ಶ್ರಮಿಸಬೇಕೆಂದೂ ಅವರು ಹೇಳಿರುವರು. ಒಂದು ವಿಷಯದಲ್ಲಿ ಪ್ರತ್ಯೇಕ ಪರಿಜ್ಞಾನವನ್ನು ಪಡೆಯುವುದಕ್ಕಿಂತ ಸರ್ವ ವಿಷಯಗಳಲ್ಲಿಯೂ ವಿದ್ಯಾರ್ಥಿಯು ಸಮುಚಿತವಾದ ಪರಿಜ್ಞಾನವನ್ನು ಪಡೆಯಬೇಕೆಂದು 1895 ರಲ್ಲಿ ಸರ್. ಫಿರೋಜಷಾ ಮೆಹತಾರವರು ತಿಳಿದಿದ್ದರು. ಅಂದಿನ ಮೆಹತಾರವರ ಭಾವನೆಗೂ, ಇಂದಿನ ರಾಮರ್ ರವರ ಭಾವನೆಗೂ ಯಾವ ವ್ಯತ್ಯಾಸವೂ ತೋರುವದಿಲ್ಲ.

ಬ್ರಿಟಿಷ್ ಮುಖ್ಯ ಮಂತ್ರಿಗಳು ಮುಖಂಡರ ವಿನಂತಿಯನ್ನು ನಿರಾಕರಿಸಿದರು

ಮಹಾತ್ಮ ಗಾಂಧಿಯವರು ಕೂಡಲೇ ಬಿಡುಗಡೆ ಮಾಡಲ್ಪಡಬೇಕೆಂದು ಜೈಲ್ಲಿಯಿಂದ ವಿ ಮುಖಂಡರು ಕಳುಹಿಸಿದ ಕೇಬಲ್ ಸಂದೇಶವನ್ನು ಮಿ|| ಚರ್ಚಿಲರು ನಿರಾಕರಿಸಿರುವರು. ಇಂಡಿಯಾ ಸಕಾರ ತೀರ್ಮಾನವನ್ನು ಎತ್ತಿಹಿಡಿದಿರುವರು.

ರುದ್ರಾಭಿಷೇಕ

ರಾಜಧಾನಿಯ ಕೋಟೆಯ ತ್ರಿನಯನೇಶ್ವರಸ್ವಾಮಿ ದೇವಸ್ಥಾನದಲ್ಲಿ ತಾ || ೨೫-೨-೪೩ ರಿಂದ ಪ್ರಾರಂಭವಾಗಿ ಮಹಾರುದ್ರ ಪರ್ವಾಗಿ ಪರವಾಗಿ ಒಳ್ಳದಿನ ರುದ್ರಾಭಿಷೇಕ ಕುಂಕುಮಾರ್ಚನೆ ಪ್ರತಿದಿನವೂ ನಡಿಸುವ ಏರ್ಪಾಡು ಇಟ್ಟಿದೆ.

ರುವ ಈ ದಿನ್ಯ ಶರೀರ ಈ ಐಶ್ವರ್ಯ ಈ ಭೋಗ ಈ ಅಧಿಕಾರ ಈ ಪ್ರಾಯ ಈ ಮೋಹದ ಮಡದಿ ಈ ಮುದ್ದು ಮಕ್ಕಳು ಇವನ್ನೆಲ್ಲಾ ಬಿಟ್ಟು ಗೊತ್ತುಗುರಿಯಿಲ್ಲದ ಎಂದೂ ಕಾಣದ ಎಂದಿಗೂ ಕಾಣಿಸದ ಅನಂತವಸ್ತುವನ್ನೂ ಅರೂಪನೂ ಅರೂಪನೂ ಆದ ನಿನ್ನನ್ನು ನಂಬಿ ನಾನು ಮಾಡುವುದಾದರೂ ಏನು ?

ಈಗಲಾದರೂ ಹೇಳು ನೀನು ಯಾರು ?

(ಮುಂದುವರಿಯುವುದು)

ಬುದ್ಧನ ಬೋಧೆ ಕ್ರಿಸ್ತನ ವಾಣಿ ಪುರಂದರ, ಕನಕರ ಹೃದಯ ಮಹಾತ್ಮರ ಮನೋಧರ್ಮ

ನಿನ್ನ ನ್ನಿಕ್ಕಿದವನಿಗೆ ಪಡ್ಡಿ ಲೆಕ್ಕಿತವಾದ ಆಹಾರವನ್ನುಣಿಸತಕ್ಕದ್ದು; ದ್ವೇಷವಾಡುವನನ್ನು ಸಲಹಬೇಕು; ಅನ್ಯತನ ನಡಿದು ತೊಂದರೆಗೀಡು ಮಾಡುವನನ್ನು 'ಸುಖೀಲಿನ' ಎಂದು ಆಶೀರ್ವದಿಸಬೇಕು; ಮೋಸ ಮಾಡಿರುವನನ ಹೆಸರನ್ನು ಮಗನಿಗಿಡಬೇಕು; ಹಿಂದೆನಿಸುವನರನ್ನು ಮುಂದೆ ನೆತ್ತಲಿರಬೇಕು; ಕೆಡಕನ್ನು ಬಯಸಿದವನ ರಸ್ತೇಹವನ್ನು ಮಾಡಬೇಕು; ಕೊಂದ ವೈರಿಯ ಮನೆಗೆ ಕರೆದುಕ್ಕೊಂಡು ಹೋಗಬೇಕು; ಬಂಧನದಲ್ಲಿಟ್ಟವರ ಸುಖವನ್ನು ಬಂಸಬೇಕು; ಲೂಟಿ ದರೋಡೆಗಳ ಮೂಲಕ ನನಗೆ ತೊಂದರೆ ಕೊಡುವವರನ್ನು ಕೊಂಡಾಡುತ್ತಿರಬೇಕು; ನಮ್ಮನ್ನು ಕಂಡು ಹೊಟ್ಟೆಕಿಚ್ಚುಪಡುವವರನ್ನು ಅದರ ದೊಡನೆ ಐರಮಾಡಿಕೊಳ್ಳಬೇಕು; ಪರಮ ಪಾವನನಾದ ಪರಮೇಶ್ವರನ ಧ್ಯಾನ ಮಗ್ನನಾಗಿ ಧನ್ಯನಾಗಬೇಕು.

ಇದೇ ಧರ್ಮದ ದಿವ್ಯ ಮಂತ್ರ.

ಒಬ್ಬನು ವರ್ಷಂಪ್ರತಿ ಎಷ್ಟು ಉಪ್ಪು ತಿನ್ನುತ್ತಾನೆ

ಮದ್ರಾಸು ಮತ್ತು ಮೈಸೂರಿನಲ್ಲಿ ರುವರು 20-32 ; ಪಂಗ ಮತ್ತು ಕಾಮರೂಪ ದೇಶೀಯರು 12-59 ಪೌಂಡುಗಳು ; ಬಿಹಾರ ಮತ್ತು ಒರಿಸ್ಸೆ ದೇಶೀಯರು 11-20 ಪೌಂಡುಗಳು. ಸಿಂಧು ಮತ್ತು ಬೆಲೂಚಿಸ್ತಾನದವರು 10-19 ಪೌಂಡುಗಳು; ಮುಂಬೈ ಮತ್ತು ಮಧ್ಯಪ್ರಾಂತ್ಯಗಳು ಮತ್ತು ಹೈದರಾಬಾದು ಪ್ರಾಂತ್ಯಗಳವರು 13-31 ಪೌಂಡುಗಳು ; ಸಂಯುಕ್ತ ಪ್ರಾಂತ್ಯಗಳು, ಪಂಜಾಬು, ರಾಜಪ್ರತಿನಿಧಿ ಮತ್ತು ಮಧ್ಯ ಇಂಡಿಯಾದವರು 10-99 ಪೌಂಡುಗಳು, ಅಂದರೆ ಮೈಸೂರು, ಮದ್ರಾಸಿನವರಿಗೆ ಉಪ್ಪಿನ ಖರ್ಚು ಹೆಚ್ಚು.

ಮುಂಡ್ಕೂರಿನ ಕೆಲವು ಗುಡಿಸಲುಗಳಿಗೆ ಬೆಂಕಿ ಹತ್ತಿಕೊಂಡಿತು

24 ನೇ ತಾ|| ಸಂಜೆ ಳಗಂಜೆ ಸಮಯದಲ್ಲಿ ಮುಂಡ್ಕೂರಿನ ಕೆಲಸಗಾರರ ನಿವಾಸಸ್ಥಾನದಲ್ಲಿ ಬೆಂಕಿ ಬಿದ್ದು 52 ಗುಡಿಸಲುಗಳು ಸುಟ್ಟು ಭಸ್ಮವಾದುವು, 212 ಜನರು ವಾಸಿಸಲು ಮನೆಯಿಲ್ಲದಂತಾಗಿದೆ. ಒಂದು ಮಗುವು ಬೆಂಕಿಗೆ ಸಿಕ್ಕಿ ಪೂರ್ಣ ಭಸ್ಮವಾಯಿತು. ಈ ಬೆಂಕಿಯಿಂದ ಸುಮಾರು 2 ಸಾವಿರ ರೂಪಾಯಿಗಳ ನಷ್ಟವಾಗಿದೆಯೆಂದು ಅಂದಾಜಾಗಿದೆ. ತೊಂದರೆಗೆ ಸಿಕ್ಕಿದ ಜನರಿಗೆ ರಾತ್ರಿ ಆಹಾರ ಪದಾರ್ಥಗಳನ್ನು ಹಂಚಲಾಯಿತು. ಮಕ್ಕಳಿಗೆ ಊಟ ಹಾಕಲಾಯ್ತೆಂದು ಗೊತ್ತಾಗಿದೆ.

ಕರ್ನಾಟಕದ ಹೆಮ್ಮೆಯ ಕನ್ನಡ ಚಿತ್ರ

ಹೆಚ್. ಆರ್. ಜಿ. ಸಿ. ಯವರ

ಶ್ರೀ ಪಿಕ್ಚರ್ಸ್ ತಯಾರಿಕೆ

ವಾಣಿ ಅಥವಾ VIOLINIST

ಎಂಬ ಕನ್ನಡ ಸಾಮಾಜಿಕ ಚಲನಚಿತ್ರದಲ್ಲಿ
ನಿಮ್ಮ ಮನರಂಜನೆಗಾಗಿ ಬೇಗಲೇ ಬರಲಿದೆ

ಸಂಗೀತರತ್ನ ಟಿ. ಚೌಡಯ್ಯ, ಕಲ್ಚರ್ಡ್ ಕಮೆಡಿಯನ್ ಕೆ. ಹಿರಣ್ಣಯ್ಯ,
ಗಾಯನಗಾಂಧರ್ವ ಚಂಪೆ ವೈದ್ಯನಾಥ ಭಾಗವತರ್ ಮೃದಂಗವಿದ್ವಾನ್ ಮಣಿ
ಶ್ರೀಮತಿ ಲಲಿತಾದೇವಿ ಚಂದ್ರಮ್ಮ, ಬಳ್ಳಾರಿರತ್ನ, ಸಂಡೂರಬಾಯಿ,
ಧನಭಾಗ್ಯಂ, ಎ. ನಾರಾಯಣರಾವ್, ಕೆ. ಎಂ. ಮುಕದೇವ್, ಮಾಸ್ಟರ್
ಬಿ. ವಿ. ಕೆ. ಮೂರ್ತಿ, ಬಿ. ಎಸ್. ಸುಬ್ಬಯ್ಯ, ಎಂ. ಮಾಧವರಾವ್
ಎ ಸುಬ್ಬಣ್ಣ ಎಂ. ಆರ್. ಪಿ. ಸಾರಥಿ,
ಶ್ರೀಮತಿ ಕೆ. ಆರ್, ಶಾಂತಿರಾಜಮ್ಮ.
ಮುಂತಾದ ಕಲಾವಿದರ ಕಲಾಪೂರಿತ ಅಭಿನಯ

ನಿಮ್ಮ ಊರಿನ ಮೆಚ್ಚಿನ ಚಿತ್ರ ಮಂದಿರಗಳಲ್ಲಿ
ಎದುರುನೋಡಿ

ನಿರ್ದೇಶಕರು— ಜಿ. ಆರ್, ರಾಮಯ್ಯನವರು
ಸಂಗೀತ ನಿರ್ದೇಶಕರು— ಸಂಗೀತರತ್ನ ಟಿ ಚೌಡಯ್ಯನವರು
ತಯಾರಿಕೆ— ಸಾಹುಕಾರ್ ಟಿ. ಎಸ್. ಶಿವಬಸವಸ್ವಾಮಿ
ಕಥಾ ಮತ್ತು ದಿಗ್ದರ್ಶಕರು— ಕೆ. ಹಿರಣ್ಣಯ್ಯ ಮತ್ತು ಎಂ. ಎಸ್ ಗೋಪಾಲ್.
ಸ್ಟೂಡಿಯೊ—ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್, ಕೊಯಂಬತ್ತೂರು.

— ಹೆಚ್ಚಿನ ವಿವರಗಳಿಗೆ —

H. R. G. C.'s Sree Picturs

AVANASHI ROAD, COIMBATORE

ಉತ್ಕೃಷ್ಟವಾದ ಹಿಂಗು



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ಊಟವು ರುಚಿಕರವಾಗಿದ್ದು, ಸಂಪೂರ್ಣ ಆರೋಗ್ಯವೂ ಸೌಖ್ಯವೂ ದೊರೆಯಲು

TG ಮಾರ್ಕಿನ ಹಿಂಗನ್ನು

ಉಪಯೋಗಿಸಿ.

ಇದನ್ನು ನೀವು ಒಂದು ಸಾರಿ ಉಪಯೋಗಿಸಿದರೆ, ನಂತರ ಬೇರೆ ಯಾವುದನ್ನೂ ಉಪಯೋಗಿಸುವುದಿಲ್ಲ.

ಒಂದು, ಅರ್ಧ, ಕಾಲು ಪೌಂಡಿನ, ಒಂದು ಸೇರು, ಒಂದು ಪಲಮ್ ಪ್ಯಾಕಿನಲ್ಲಿ ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲೂ ದೊರೆಯುತ್ತದೆ.

ನಮ್ಮ ಪರಿಮಳ ಅಡಿಕೆಪುಡಿಯು ಸುಪ್ರಸಿದ್ಧವಾದುದು.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪನಾಯಕ್ ಸ್ಟ್ರೀಟ್, **ಮದರಾಸು.**

Edited, Printed & publishec by M. S. Krishna Rao, at the Satyavadi Press, Chamaraja Agrahar, Mysore.

ಮಗುವನ್ನು ಆನಂದವಾಗಿಡಿ, ಅವನಿಗೆ ಕೊಡಿ

ಗ್ರೈಪ್ ಸಿರಪ್

ವ್ಯಾಪಾರದ ITL ಗುರುತು

ಮಕ್ಕಳಿಗೆ ಆದರ್ಶ ಔಷಧಿ

ಆಹಾರದ ತೊಂದರೆ, ಹೊಟ್ಟೆ ಹಿಡಿತ, ಹಲ್ಲು ಬರುವಾಗ ಆಗುವ ತೊಂದರೆ ಇತ್ಯಾದಿಗಳನ್ನು ನಿವಾರಿಸುತ್ತದೆ.

ಸೇವಿಸಲು ರುಚಿಕರ

ಮತ್ತು ಬರುವ ಮೂಲಿಕೆಗಳ ಮಿಶ್ರಣವಿಲ್ಲ

ಕ್ಷೇಮಕರ ಮತ್ತು ಗುಣಕಾರಿ

— ತಯಾರಿಕರು —

ಗೌರ್ನಮೆಂಟ್ ಇಂಡಸ್ಟ್ರಿಯಲ್ ಆಂಡ್ ಟೆಸ್ಟಿಂಗ್ ಲೆಬೊರೇಟರಿ

ಮಲ್ಲೇಶ್ವರಂ, ಬೆಂಗಳೂರು.

ಅಪರಂಜಿ ಎರಡನೆ ಅಮೋಘ ವಾರ ಶೋಭ



ಮೈಸೂರು ವೈಶ್ಯ ಪತ್ರಿಕೆ

ಈ ಉತ್ತಮ ಸಚಿತ್ರ ಕನ್ನಡ-ತೆಲಗು

ಮಾಸಪತ್ರಿಕೆಗೆ

ಚಂದಾದಾರರಾಗಿರಿ

ವಾರ್ಷಿಕ ಚಂದಾ ರೂ. 2-4-0

ಬಿಡಿ ಪ್ರತಿ 4 ಆಣೆ.

ಕಾರ್ಯಾಲಯ ;

ಶ್ರೀ ವಾಸವಾಂಬ ಭವನ

ಆಶೋಕ ರಸ್ತೆ — ಮೈಸೂರು

MLMS & S

ಮಂಗಳೂರು ಸುವರ್ಣ

ಸ್ಪೆಷಲ್ ಬೀಡಿಯನ್ನೇ

ಉಪಯೋಗಿಸಿ. ಒಳ್ಳೇ ಸಿಪ್ಪಾನಿ ಹೊಗೇ ಸೊಪ್ಪಿನಿಂದ ತಯಾರಿಸಿರುತ್ತೆ. ಒಂದಾವರ್ತಿ ಪರೀಕ್ಷಿಸಿ ನೋಡಿ.

ಮೈಸೂರು ಏಜೆಂಟರು, ಪಿ. ಮಂಜಪ್ಪ

ಬೇರೆ ಸ್ಥಳಗಳಿಗೆ ಏಜೆಂಟರು ಬೇಕು.